# ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 ಮತ್ತು ನಿಯಮ 2008

## (ನಿಯಮಗಳ ತಿದ್ದುಪಡಿ–2012)

# ಮುನ್ನುಡಿ

ಉಡುಪಿ ಜಿಲ್ಲೆಯಲ್ಲಿ ಅನುಸೂಚಿತ ಬುಡಕಟ್ಟುಗಳ ಹಾಗೂ ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ಮತ್ತು ನಿಯಮಗಳು 2008 ನಿಯಮಗಳ ತಿದ್ದುಪಡಿ 2012ರ ಪ್ರಕಾರ ಇದುವರೆಗೆ ಈ ಕೆಳಗಿನಂತೆ ಪ್ರಗತಿ ಸಾಧಿಸಲಾಗಿದೆ.

| ತಾಲೂಕು | ಅರಣ್ಯ ಹಕ್ಕು ಪ್ರಗತಿ ವರದಿ | | | ಸಮುದಾಯದ ಹಕ್ಕು ಪ್ರಗತಿ ವರದಿ | | | ಅರಣ್ಯ ಹಕ್ಕು ಕಾಯ್ದೆಯಡಿ ನೀಡಿದ ಅರಣ್ಯ ಹಕ್ಕು ವಿಸ್ತೀರ್ಣ (ಎಕ್ರೆಗಳಲ್ಲಿ) |
|---|---|---|---|---|---|---|---|
| | ಪ.ವರ್ಗ | ಇತರೇ | ಒಟ್ಟು | ಪ.ವರ್ಗ | ಇತರೇ | ಒಟ್ಟು | |
| ಉಡುಪಿ | 07 | – | 07 | 0 | 0 | 0 | 05.40 |
| ಕುಂದಾಪುರ | 339 | – | 339 | 0 | 0 | 0 | 471.71 |
| ಕಾರ್ಕಳ | 172 | – | 172 | 0 | 0 | 0 | 201.91 |
| **ಒಟ್ಟು** | **518** | **–** | **518** | **0** | **0** | **0** | **679.02** |

ಈ ಮೇಲಿನಂತೆ ಅರಣ್ಯ ಭೂಮಿ ಹಕ್ಕುಪತ್ರ ಪಡೆದ ಕುಟುಂಬಗಳು ವಾಸಿಸುವ ಕಾಲನಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಈ ಕೆಳಗಿನಂತೆ ಸರಕಾರದಿಂದ ಅನುದಾನ ಬಿಡುಗಡೆಯಾಗಿದ್ದು ಕಾಮಗಾರಿಗಳು ಅನುಷ್ಠಾನದ ಹಂತದಲ್ಲಿದೆ.

| ಕ್ರ.ಸಂ. | ಮೂಲಭೂತ ಸೌಲಭ್ಯ | ಬಿಡುಗಡೆಯಾದ ಅನುದಾನ |
|---|---|---|
| 1 | ಸೋಲಾರ್ ಲೈಟಿಂಗ್ ಸಿಸ್ಟಂ | 20.00 ಲಕ್ಷ |
| 2 | ಕಾಲನಿ ಮೂಲಭೂತ ಸೌಲಭ್ಯ (ಕುಡಿಯುವ ನೀರು, ಕಾಂಕ್ರೀಟು ರಸ್ತೆ, ಸಮುದಾಯ ಭವನ) | 156.00 ಲಕ್ಷ |
| | **ಒಟ್ಟು** | 176.00 ಲಕ್ಷ |

ಅರಣ್ಯ ಹಕ್ಕು ಕಾಯ್ದೆ ಬಗ್ಗೆ ಗ್ರಾಮ/ಉಪವಿಭಾಗ ಮಟ್ಟ/ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಯ ಸದಸ್ಯರಿಗೆ ಅರಿವು ಮೂಡಿಸಿ ತನ್ಮೂಲಕ ಅರಣ್ಯವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಪಡೆಯಲು ಈ ಹೊತ್ತಿಗೆ ಸಹಕಾರಿಯಾಗಲಿ ಎಂದು ಆಶಿಸುತ್ತೇವೆ.

**ಡಾ| ಎಂ. ಟಿ. ರೇಜು,** ಐ.ಎ.ಎಸ್.
ಜಿಲ್ಲಾಧಿಕಾರಿ
ಉಡುಪಿ ಜಿಲ್ಲೆ

**ಕೆ.ಎಸ್. ಪ್ರಭಾಕರ ಶರ್ಮ,** ಕೆ.ಎ.ಎಸ್.
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಜಿಲ್ಲಾ ಪಂಚಾಯತ್,
ಉಡುಪಿ

**ಜಿ.ಎಂ. ಸಾಲೀಮಠ್**
ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ,
ಉಡುಪಿ

# ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006

## (2007ರ 2)

(29 ನೇ ಡಿಸೆಂಬರ್, 2006)

ತಲತಲಾಂತರಗಳಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಆದರೆ ಅವರ ಹಕ್ಕುಗಳನ್ನು ದಾಖಲಿಸಿರದ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಜಮೀನಿನಲ್ಲಿ ಅರಣ್ಯ ಹಕ್ಕುಗಳನ್ನು ಮತ್ತು ಅಧಿಭೋಗವನ್ನು ಮಾನ್ಯ ಮಾಡಲು ಮತ್ತು ನಿಹಿತಗೊಳಿಸಲು ಹಾಗೂ ಹಾಗೆ ನಿಹಿತಗೊಳಿಸಲಾದ ಅರಣ್ಯ ಹಕ್ಕುಗಳನ್ನು ಮತ್ತು ಅರಣ್ಯ ಜಮೀನಿಗೆ ಸಂಬಂಧಿಸಿದ ಅಂಥ ಮಾನ್ಯತೆಗೆ ಹಾಗೂ ನಿಹಿತಗೊಳಿಸುವಿಕೆಗೆ ಅಗತ್ಯವಾದ ಸಾಕ್ಷ್ಯದ ಸ್ವರೂಪವನ್ನು ದಾಖಲಿಸುವುದಕ್ಕಾಗಿ ನಿರ್ದಿಷ್ಟ ರೂಪರೇಷೆಗೆ ಅವಕಾಶ ಕಲ್ಪಿಸುವ ಅಧಿನಿಯಮ.

ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಸಂಬಂಧದಲ್ಲಿ ಮಾನ್ಯ ಮಾಡಲಾದ ಹಕ್ಕುಗಳು, ಸುಸ್ಥಿರ ಬಳಕೆಯ, ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಪರಿಸರ ಸಮತೋಲನ ನಿರ್ವಹಣೆಯ ಹೊಣೆಗಾರಿಕೆಗಳನ್ನು ಮತ್ತು ಅಧಿಕಾರವನ್ನು ಮತ್ತು ಆ ಮೂಲಕ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಜೀವನೋಪಾಯವನ್ನು ಮತ್ತು ಆಹಾರ ಭದ್ರತೆಯನ್ನು ಸುನಿಶ್ಚಿತಗೊಳುವಾಗ ಅರಣ್ಯಗಳ ಸಂರಕ್ಷಣ ಪದ್ಧತಿಯನ್ನು ಬಲಪಡಿಸುವುದು ಒಳಗೊಳ್ಳುವುದರಿಂದ;

ಮತ್ತು ಅರಣ್ಯ ಪರಿಸರ ವ್ಯವಸ್ಥೆಯನ್ನು ತದ್ವತ್ತಾಗಿ ಕಾಪಾಡಿಕೊಂಡು ಹಾಗೂ ಉಳಿಸಿಕೊಂಡು ಬರುವಲ್ಲಿ ಅದರ ಅವಿಭಾಜ್ಯ ಅಂಗವಾಗಿರುವ, ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳಿಗೆ ವಸಾಹತುಶಾಹಿ ಹಾಗೂ ಸ್ವತಂತ್ರ ಭಾರತದ ಅವಧಿಯಲ್ಲಿನ ರಾಜ್ಯ ಅರಣ್ಯಗಳ ಸಂಯೋಜನೆಯಲ್ಲಿ ಅವರ ಪಿತ್ರಾರ್ಜಿತ ಜಮೀನುಗಳ ಮತ್ತು ಅವರ ವಾಸಸ್ಥಳದ ಮೇಲಿನ ಅರಣ್ಯ ಹಕ್ಕುಗಳನ್ನು ಸಾಕಷ್ಟು ಮಾನ್ಯ ಮಾಡಿಲ್ಲದಿರುವುದರಿಂದಾಗಿ ಐತಿಹಾಸಿಕ ಅನ್ಯಾಯ ಉಂಟು ಮಾಡಿರುವುದರಿಂದ;

ಮತ್ತು ರಾಜ್ಯದ ಅಭಿವೃದ್ಧಿಗಾಗಿ ರಾಜ್ಯವು ಮಧ್ಯ ಪ್ರವೇಶಿಸಬೇಕಾಗಿದ್ದುದರಿಂದ ತಮ್ಮ ವಾಸಕ್ಕಾಗಿ ಬೇರೆ ಸ್ಥಳವನ್ನು ಪುನಃ ಕಂಡುಕೊಳ್ಳಬೇಕಾದ ಒತ್ತಾಯಕ್ಕೊಳಗಾದವರೂ

# ಅಧ್ಯಾಯ – I

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭಿಕ : (1)** ಈ ಅಧಿನಿಯಮವನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 ಎಂದು ಕರೆಯತಕ್ಕದ್ದು.

2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

3) ಇದು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:–

(ಎ) "ಸಮುದಾಯ ಅರಣ್ಯ ಸಂಪನ್ಮೂಲ" ಎಂದರೆ, ಮೀಸಲು ಅರಣ್ಯಗಳು, ಸಂರಕ್ಷಿತ ಅರಣ್ಯಗಳ ಮತ್ತು ಸಮುದಾಯಕ್ಕೆ ಪಾರಂಪರಿಕವಾಗಿ ಪ್ರವೇಶವಕಾಶ ಇರುವ ಅಭಯಾರಣ್ಯಗಳು ಹಾಗೂ ರಾಷ್ಟ್ರೀಯ ಉದ್ಯಾನಗಳಂತಹ ಸಂರಕ್ಷಿತ ಪ್ರದೇಶಗಳೂ ಸೇರಿದಂತೆ, ಗ್ರಾಮೀಣ ಸಮುದಾಯಗಳ ಸಂದರ್ಭದಲ್ಲಿ ಗ್ರಾಮದ ಪಾರಂಪರಿಕ ಅಥವಾ ರೂಢಿಗತ ಗಡಿಯೊಳಗಿನ ಅಥವಾ ಋತುಕಾಲಿಕ ಭೂ ಬಳಕೆಯಲ್ಲಿರುವ ರೂಢಿಗತ ಸಾಮಾನ್ಯ ಅರಣ್ಯ ಎಂದು ಅರ್ಥ;

(ಬಿ) "ಅಪಾಯದಲ್ಲಿರುವ ವನ್ಯಜೀವಿ ತಾಣ" ಎಂದರೆ, ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು, 4ನೇ ಪ್ರಕರಣದ (1) ನೇ ಹಾಗೂ(2) ನೇ ಉಪ ಪ್ರಕರಣದಿಂದ ಉದ್ಭವಿಸುವ ಕಾರ್ಯ ವಿಧಾನದ ಅಗತ್ಯತೆಗಳಿಗನುಸಾರವಾಗಿ ಅಂಥ ಪ್ರದೇಶಗಳನ್ನು ಗುರುತಿಸುವಲ್ಲಿ ಆ ಸರ್ಕಾರದಿಂದ ನೇಮಕಗೊಂಡ ಸ್ಥಳೀಯ ತಜ್ಞರನ್ನು ಒಳಗೊಂಡಿರುವ, ಅವರಲ್ಲಿ ಬುಡಕಟ್ಟು, ವ್ಯವಹಾರಗಳ ಸಚಿವಾಲಯದ ಪ್ರತಿನಿಧಿಯನ್ನು ಸಹ ಒಳಗೊಂಡಿರುವ ಒಂದು ತಜ್ಞ ಸಮಿತಿಯಿಂದ ಮುಕ್ತ ಸಮಾಲೋಚನೆ ನಡೆಸಿದ ತರುವಾಯ ನಿರ್ಧರಿಸಬಹುದಾದಂತೆ ಮತ್ತು ಅಧಿಸೂಚಿಸಬಹುದಾದಂತೆ ವೈಜ್ಞಾನಿಕ ಮತ್ತು ವಸ್ತುನಿಷ್ಠ ಮಾನದಂಡವನ್ನಾಧರಿಸಿ ಪ್ರಕರಣಕ್ಕನುಸಾರ ನಿದಿಷ್ಟವಾಗಿ ಹಾಗೂ ಸ್ಪಷ್ಟವಾಗಿ ಸ್ಥಾಪಿಸಲಾಗಿರುವ ಮತ್ತು ವನ್ಯಜೀವಿ ಸಂರಕ್ಷಣೆ ಉದ್ದೇಶಕ್ಕಾಗಿ ಅಂಥ ಪ್ರದೇಶಗಳನ್ನು ಅತಿಕ್ರಮಣ ಮಾಡದಂತೆ ಇಟ್ಟುಕೊಂಡು ಬರಲು ಅಗತ್ಯವಿರುವ ರಾಷ್ಟ್ರೀಯ

ಉದ್ಯಾನ ಮತ್ತು ಅಭಯಾರಣ್ಯಗಳಂಥ ಪ್ರದೇಶಗಳು ಎಂದು ಅರ್ಥ;

(ಸಿ) "ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳು" ಎಂದರೆ, ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸುವ ಮತ್ತು ವಾಸ್ತವಿಕ ಜೀವನೋಪಾಯ ಅವಶ್ಯಕತೆಗಳಿಗಾಗಿ ಅರಣ್ಯಗಳಲ್ಲಿ ವಾಸಿಸುತ್ತಿರುವ ಅಥವಾ ಅರಣ್ಯ ಜಮೀನುಗಳ ಮೇಲೆ ಅವಲಂಬಿತವಾಗಿರುವ ಮತ್ತು ಅನುಸೂಚಿತ ಬುಡಕಟ್ಟು ಸದಸ್ಯರು ಅಥವಾ ಸಮುದಾಯ ಎಂದು ಅರ್ಥ;

ಮತ್ತು ಇದರಲ್ಲಿ ಗ್ರಾಮೀಣ ಸಮುದಾಯಗಳನ್ನು ಒಳಗೊಂಡಿರುವ ಅನುಸೂಚಿತ ಬುಡಕಟ್ಟಿನವರು ಸೇರುತ್ತಾರೆ.

(ಡಿ) "ಅರಣ್ಯ ಜಮೀನು" ಎಂದರೆ ಯಾವುದೇ ಅರಣ್ಯ ಪ್ರದೇಶದೊಳಗೆ ಬರುವ ಯಾವುದೇ ವರ್ಣನೆಯ ಜಮೀನು ಎಂದು ಅರ್ಥ ಮತ್ತು ಇದು ವರ್ಗೀಕರಿಸದ ಅರಣ್ಯಗಳನ್ನು, ಸರಹದ್ದು ಗುರುತು ಮಾಡಿರದ ಅರಣ್ಯಗಳನ್ನು, ಅಸ್ತಿತ್ವದಲ್ಲಿರುವ ಅಥವಾ ಭಾವಿತ ಅರಣ್ಯಗಳನ್ನು, ಸಂರಕ್ಷಿತ ಅರಣ್ಯಗಳನ್ನು, ಮೀಸಲು ಅರಣ್ಯಗಳನ್ನು, ಅಭಯಾರಣ್ಯಗಳನ್ನು ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನು ಒಳಗೊಳ್ಳುತ್ತದೆ.

(ಇ) "ಅರಣ್ಯ ಹಕ್ಕುಗಳು" ಎಂದರೆ 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅರಣ್ಯ ಹಕ್ಕುಗಳು ಎಂದು ಅರ್ಥ;

(ಎಫ್) "ಅರಣ್ಯ ಗ್ರಾಮಗಳು" ಎಂದರೆ, ಅರಣ್ಯ ಕಾರ್ಯಚರಣೆಗಳಿಗಾಗಿ ಯಾವುದೇ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯು ಅರಣ್ಯಗಳ ಒಳಗೆ ಸ್ಥಾಪಿಸಿರುವ ಅಥವಾ ಅರಣ್ಯ ಮೀಸಲು ಪ್ರಕ್ರಿಯೆಯ ಮೂಲಕ ಅರಣ್ಯ ಗ್ರಾಮಗಳಾಗಿ ಪರಿವರ್ತಿತವಾಗಿರುವ ನೆಲಸು ಪ್ರದೇಶಗಳನ್ನು ಮತ್ತು ಇದು ಅರಣ್ಯ ನೆಲಸು ಗ್ರಾಮಗಳನ್ನು, ನಿಗದಿಗೊಳಿಸಿದ ಮಾಗಣಿ ಹಿಡುವಳಿಗಳನ್ನು, ಎಲ್ಲ ರೀತಿಯ ಟಾಂಗ್ಯಾ ನೆಲಸು ಪ್ರದೇಶಗಳನ್ನು, ಯಾವುದೇ ಹೆಸರಿನಿಂದ ಕರೆಯಲಿ ಅಂಥ ಗ್ರಾಮಗಳನ್ನು ಒಳಗೊಳ್ಳುತ್ತದೆ ಮತ್ತು ಸಾಗುವಳಿಗಾಗಿ ಮತ್ತು ಇತರ ಬಳಕೆಗಾಗಿ ಸರ್ಕಾರವು ಅನುಮತಿ ನೀಡಿರುವ ಭೂಮಿಗಳನ್ನು ಒಳಗೊಳ್ಳುತ್ತದೆ;

(ಜಿ) "ಗ್ರಾಮ ಸಭಾ" ಎಂದರೆ ಗ್ರಾಮದ ಎಲ್ಲ ವಯಸ್ಕ ಸದಸ್ಯರನ್ನು ಒಳಗೊಂಡಿರುವ ಗ್ರಾಮಸಭೆ ಮತ್ತು ಪಂಚಾಯಿತಿಗಳು ಇಲ್ಲದಿರುವ ರಾಜ್ಯಗಳ ಸಂದರ್ಭದಲ್ಲಿ ಮತ್ತು ಪೂರ್ಣವಾಗಿ ಹಾಗೂ ಅನಿರ್ಬಂಧಿತವಾಗಿ ಮಹಿಳೆಯರು ಭಾಗವಹಿಸುವ ಪಾಡಾಗಳು, ತೋಲಾಗಳು ಮತ್ತು ಇತರೆ ಪಾರಂಪರಿಕ ಗ್ರಾಮ ಸಂಸ್ಥೆಗಳು ಮತ್ತು ಚುನಾಯಿತ ಗ್ರಾಮ ಸಮಿತಿಗಳು ಎಂದು ಅರ್ಥ;

(ಹೆಚ್) "ವಾಸಸ್ಥಳ" ಎಂಬುದು ಮೀಸಲು ಅರಣ್ಯಗಳಲ್ಲಿ ಮತ್ತು ಸಂರಕ್ಷಿತ ಅರಣ್ಯಗಳಲ್ಲಿ ಆದಿ ಬುಡಕಟ್ಟು ಗುಂಪುಗಳ ಮತ್ತು ಕೃಷಿಪೂರ್ವ ಸಮುದಾಯಗಳ ಮತ್ತು ಇತರ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ರೂಢಿಗತ ವಾಸಸ್ಥಳವನ್ನು ಮತ್ತು ಅಂಥ ಇತರ ವಾಸಸ್ಥಳವನ್ನು ಒಳಗೊಂಡಿರುವ ಪ್ರದೇಶವನ್ನು ಒಳಗೊಳ್ಳುತ್ತದೆ;

(ಐ) "ಸಣ್ಣ ಅರಣ್ಯ ಉತ್ಪನ್ನಗಳು" ಎಂಬುದು ಬಿದಿರು, ಕುರುಚಲು ಗಿಡ, ತುಂಡು ಮರ, ಬೆತ್ತ, ಟಸ್ಸಾರ್, ರೇಷ್ಮೆ ಗೂಡು, ಜೇನು, ಮೇಣ, ಅರಗು, ಟೆಂಡು ಅಥವಾ ಕೆಂಡ ಎಲೆಗಳು, ಔಷದೀಯ ಸಸ್ಯಗಳು ಮತ್ತು ಗಿಡಮೂಲಿಕೆಗಳು, ಬೇರುಗಳಿ, ಗೆಡ್ಡೆಗಳು ಮತ್ತು ಅಂಥವುಗಳನ್ನು ಒಳಗೊಂಡಿರುವ ಸಸ್ಯ ಮೂಲದ, ಮರಮುಟ್ಟಲ್ಲದ ಎಲ್ಲ ಅರಣ್ಯ ಉತ್ಪನ್ನಗಳನ್ನು ಒಳಗೊಳ್ಳುತ್ತದೆ;

(ಜೆ) "ಸಂಪರ್ಕ ಏಜೆನ್ಸಿ" ಎಂದರೆ 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಂಪರ್ಕ

ಏಜೆನ್ಸಿ;

(ಕೆ) "ಅಧಿಸೂಚನೆ" ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಲ್) "ಗೊತ್ತು ಪಡಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದುದು;

(ಎಂ) "ಅನುಸೂಚಿತ ಪ್ರದೇಶಗಳು" ಎಂದರೆ, ಸಂವಿಧಾನದ 244ನೇ ಅನುಚ್ಛೇದದ(1)ನೇ ಖಂಡದಲ್ಲಿ ಉಲ್ಲೇಖಿಸಿದ ಅನುಸೂಚಿತ ಪ್ರದೇಶಗಳು;

(ಎನ್) "ಸುಸ್ಥಿರ ಬಳಕೆ"ಯು ಜೈವಿಕ ವೈವಿಧ್ಯತೆ ಅಧಿನಿಯಮ, 2002(2003ರ 18) ರ2ನೇ ಪ್ರಕರಣದಲ್ಲಿನ(ಒ) ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಒ) "ಇತರ ಪಾರಂಪರಿಕ ಅರಣ್ಯವಾಸಿ" ಎಂದರೆ 2005ರ ಡಿಸೆಂಬರ್ 13ಕ್ಕಿಂತಲೂ ಮುಂಚೆ ಕೊನೆ ಪಕ್ಷ ಮೂರು ತಲೆಮಾರಿನವರೆಗೆ ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸಿದ ಮತ್ತು ವಾಸ್ತವಿಕ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯದ ಅಥವಾ ಅರಣ್ಯಗಳ ಜಮೀನಿನ ಮೇಲೆ ಅವಲಂಬಿತವಾಗಿರುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಸಮುದಾಯ:

**ವಿವರಣೆ:** ಈ ಖಂಡದ ಉದ್ದೇಶಕ್ಕಾಗಿ, "ತಲೆಮಾರು" ಎಂದರೆ, ಇಪ್ಪತ್ತೈದು ವರ್ಷಗಳನ್ನು ಒಳಗೊಂಡಿರುವ ಒಂದು ಅವಧಿ.

(ಪಿ) "ಗ್ರಾಮ" ಎಂದರೆ:–

(i) ಪಂಚಾಯಿತಿಗಳ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996ರ (1996ರ 40) 4ನೇ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಗ್ರಾಮ; ಅಥವಾ

(ii) ಅನುಸೂಚಿತ ಪ್ರದೇಶಗಳನ್ನು ಹೊರತುಪಡಿಸಿ ಪಂಚಾಯಿತಿಗಳಿಗೆ ಸಂಬಂಧಿಸಿದ ಯಾವುದೇ ರಾಜ್ಯದ ಕಾನೂನಿನಲ್ಲಿ ಗ್ರಾಮ ಎಂದು ಉಲ್ಲೇಖಿತವಾಗಿರುವ ಯಾವುದೇ ಪ್ರದೇಶ; ಅಥವಾ

(iii) ಅರಣ್ಯ ಗ್ರಾಮಗಳು, ಹಳೆಯ ವಾಸಸ್ಥಳ ಅಥವಾ ನೆಲಸು ಪ್ರದೇಶಗಳು ಮತ್ತು ಗ್ರಾಮವೆಂದು ಅಧಿಸೂಚಿತವಾಗಿರಲಿ ಅಥವಾ ಇಲ್ಲದಿರಲಿ, ಮೋಜಣಿ ಮಾಡಿರದ ಗ್ರಾಮಗಳು ಎಂದು ಅರ್ಥ; ಅಥವಾ

(iv) ಪಂಚಾಯಿತಿಗಳು ಇಲ್ಲದಿರುವ ರಾಜ್ಯಗಳ ಸಂದರ್ಭದಲ್ಲಿ ಯಾವುದೇ ಹೆಸರಿನಿಂದ ಕರೆಯುವ ಪಾರಂಪರಿಕ ಗ್ರಾಮ;

(ಕ್ಯೂ) "ವನ್ಯಪ್ರಾಣಿ" ಎಂದರೆ, ವನ್ಯಜೀವಿ(ರಕ್ಷಣೆ) ಅಧಿನಿಯಮ, 1972(1972ರ 53)ರ 1ರಿಂದ 4ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಸ್ವಭಾವತಃ ಕ್ರೂರ ಜಾತಿಯ ಯಾವುದೇ ಪ್ರಾಣಿ.

## ಅಧ್ಯಾಯ –II

# ಅರಣ್ಯ ಹಕ್ಕುಗಳು

**3. ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳು:–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ವೈಯಕ್ತಿಕ ಹಿಡುವಳಿಯನ್ನು ಅಥವಾ ಸಮುದಾಯ ಹಿಡುವಳಿಯನ್ನು ಅಥವಾ ಅವೆರಡನ್ನೂ ದೊರಕಿಸಿಕೊಡುವ ಈ ಮುಂದಿನ ಹಕ್ಕುಗಳು, ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳಗತಕ್ಕದ್ದು, ಎಂದರೆ:–

(ಎ) ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ಸದಸ್ಯನು ಅಥವಾ ಸದಸ್ಯರುಗಳು ಅಥವಾ ಇತರ ಪಾರಂಪರಿಕ ಅರಣ್ಯವಾಸಿಗಳು ವಾಸ ಮಾಡುವುದಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ಸ್ವತಃ ಸಾಗುವಳಿ ಮಾಡಲು ವೈಯಕ್ತಿಕ ಅಥವಾ ಸಮುದಾಯ ಅಧಿಬೋಗದ ಮೇರೆಗೆ ಅರಣ್ಯ ಜಮೀನನ್ನು ಹೊಂದುವ ಮತ್ತು ಅಲ್ಲಿ ಜೀವಿಸುವ ಹಕ್ಕು;

(ಬಿ) ಹಿಂದಿನ ರಾಜ–ಮಹಾರಾಜರ ಸಂಸ್ಥಾನಗಳಲ್ಲಿ ಜಮೀನುದಾರಿ ಅಥವಾ ಅಂತಹ ಮಧ್ಯವರ್ತಿ ಪದ್ಧತಿಗಳಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುತ್ತಿದ್ದ ಮತ್ತು ಅನುಸರಿಸುತ್ತಿದ್ದವುಗಳೂ ಸೇರಿದಂತೆ ನಿಸ್ತಾರ್, ಮುಂತಾದ ಸಮುದಾಯ ಹಕ್ಕುಗಳು;

(ಸಿ) ಒಡೆತನದ ಹಕ್ಕು, ಗ್ರಾಮದ ಸರಹದ್ದುಗಳ ಒಳಗೆ ಅಥವಾ ಹೊರಗೆ ಪಾರಂಪರಿಕವಾಗಿ ಸಂಗ್ರಹಿಸಲಾಗುತ್ತಿರುವ ಸಣ್ಣ ಅರಣ್ಯ ಉತ್ಪನ್ನವನ್ನು ಸಂಗ್ರಹಿಸಲು ಪ್ರವೇಶಿಸುವ ಅವುಗಳನ್ನು ಬಳಸಲು ಮತ್ತು ವಿಲೆ ಮಾಡಲು ಇರುವ ಹಕ್ಕು;

(ಡಿ) ಜಲನಿಕಾಯಗಳಲ್ಲಿರುವ ಮೀನು ಮತ್ತು ಇತರ ಉತ್ಪನ್ನಗಳನ್ನು ಬಳಸುವ ಅಥವಾ ಅವುಗಳನ್ನು ಹೊಂದುವ (ನೆಲೆಸಿಗರ ಅಥವಾ ವಲಸಿಗರ ಇಬ್ಬರ) ಮೇಯಿಸುವ ಮತ್ತು ಅಲೆಮಾರಿ ಅಥವಾ ಗ್ರಾಮ ಸಮುದಾಯಗಳಿಗೆ ಇರುವ ಪಾರಂಪರಿಕ ಋತು ಕಾಲಿಕ ಸಂಪನ್ಮೂಲಗಳನ್ನು ಹೊಂದುವ ಸಮುದಾಯದ ಇತರ ಹಕ್ಕುಗಳು;

(ಇ) ಆದಿ ಬುಡಕಟ್ಟು ಗುಂಪುಗಳಿಗೆ ಮತ್ತು ಕೃಷಿಪದ್ಧತಿ ಬರುವ ಮುಂಚೆ ಇದ್ದ ಸಮುದಾಯಗಳಿಗೆ ವಾಸಿಸುವ ಮತ್ತು ವಾಸಸ್ಥಳದ ಮೇಲೆ ಸಮುದಾಯಕ್ಕಿರುವ ಹಿಡುವಳಿ ಅವಧಿಯೂ ಒಳಗೊಂಡಂತೆ ಹಕ್ಕುಗಳು;

(ಎಫ್) ಯಾವ ರಾಜ್ಯದಲ್ಲಿ ಭೂಮಿಗಳ ಮೇಲಿನ ಕ್ಲೇಮು ವಿವಾದದಲ್ಲಿದೆಯೋ ಆ ಯಾವುದೇ ರಾಜ್ಯದಲ್ಲಿ ಯಾವುದೇ ಹೆಸರಿನಲ್ಲಿರುವ ವಿವಾದಿತ ಜಮೀನುಗಳಲ್ಲಿ ಅಥವಾ ಅವುಗಳ ಮೇಲಿರುವ ಹಕ್ಕುಗಳು;

(ಜಿ) ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಅರಣ್ಯ ಜಮೀನುಗಳ ಸಂಬಂಧದಲ್ಲಿ ನೀಡಿರುವ ಪಟ್ಟಾಗಳನ್ನು ಅಥವಾ ಗುತ್ತಿಗೆಗಳನ್ನು ಅಥವಾ ಮಂಜೂರಾತಿಗಳನ್ನು ಹಕ್ಕುಗಳನ್ನಾಗಿ ಪರಿವರ್ತಿಸಿಕೊಳ್ಳುವ ಹಕ್ಕುಗಳಿಗೆ ಸಂಬಂಧಿಸಿದಂತೆ ಹಕ್ಕುಗಳು;

(ಹೆಚ್) ಎಲ್ಲಾ ಅರಣ್ಯ ಗ್ರಾಮಗಳಲ್ಲಿ ಹಳೆಯ ವಾಸಸ್ಥಾನದಲ್ಲಿ ಮೋಜಣಿ ಮಾಡದ ಗ್ರಾಮಗಳಲ್ಲಿ ಮತ್ತು ಅರಣ್ಯಗಳಲ್ಲಿರುವ ಇತರ ಗ್ರಾಮಗಳಲ್ಲಿ ನೆಲೆಸುವ ಮತ್ತು ಅವುಗಳು ದಾಖಲಾಗಿರಲಿ, ಅಧಿಸೂಚಿತವಾಗಿರಲಿ ಅಥವಾ ಇಲ್ಲದಿರಲಿ, ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಹಕ್ಕು;

(ಐ) ಸುಸ್ಥಿರ ಬಳಕೆಗಾಗಿ ಸಮುದಾಯವು ಪಾರಂಪರಿಕವಾಗಿ ರಕ್ಷಿಸುತ್ತಿರುವ ಮತ್ತು ಸಂರಕ್ಷಿಸುತ್ತಿರುವ ಯಾವುದೇ ಸಮುದಾಯದ ಅರಣ್ಯ ಸಂಪನ್ಮೂಲವನ್ನು ರಕ್ಷಿಸುವ, ಪುನರುತ್ಪಾದಿಸುವ ಅಥವಾ ಸಂರಕ್ಷಿಸುವ ಅಥವಾ ನಿರ್ವಹಣೆ ಮಾಡುವ ಹಕ್ಕು;

(ಜೆ) ಯಾವುದೇ ರಾಜ್ಯ ಕಾನೂನಿನ ಅಥವಾ ಯಾವುದೇ ಸ್ವಾಯತ್ತ ಜಿಲ್ಲಾ ಪರಿಷತ್ತಿನ ಅಥವಾ ಸ್ವಾಯತ್ತ ಪ್ರಾದೇಶಿಕ ಪರಿಷತ್ತಿನ ಕಾನೂನುಗಳ ಅಡಿಯಲ್ಲಿ ಮಾನ್ಯ ಮಾಡಿದ ಹಕ್ಕುಗಳ ಅಥವಾ ಯಾವುದೇ ರೂಢಿಗತ ಕಾನೂನಿನ ಅಡಿಯಲ್ಲಿ ಬುಡಕಟ್ಟು ಜನಾಂಗದ ಹಕ್ಕುಗಳೆಂದು ಅಂಗೀಕೃತವಾಗಿರುವ ಹಕ್ಕುಗಳು;

(ಕೆ) ಜೈವಿಕ ವೈವಿಧ್ಯತೆ ಹಕ್ಕು ಮತ್ತು ಜೈವಿಕ ವೈವಿಧ್ಯತೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಮತ್ತು ಪಾರಂಪರಿಕ ಜ್ಞಾನಕ್ಕೆ ಇರುವ ಸಮುದಾಯದ ಹಕ್ಕು;

(ಎಲ್) (ಎ)ಯಿಂದ (ಕೆ)ವರೆಗಿನ ಖಂಡಗಳಲ್ಲಿ ನಮೂದಿಸದಿರುವ, ಆದರೆ ಯಾವುದೇ ಜಾತಿಯ ವನ್ಯಪ್ರಾಣಿಯನ್ನು ಬೇಟೆಯಾಡುವ ಅಥವಾ ಉಪಾಯದಿಂದ ಹಿಡಿಯುವ ಅಥವಾ ಅದರ ಶರೀರದ ಭಾಗವನ್ನು ತೆಗೆದುಕೊಳ್ಳುವ ಪಾರಂಪರಿಕ ಹಕ್ಕನ್ನು ಹೊರತುಪಡಿಸಿ, ಸಂದರ್ಭಾನುಸಾರ, ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳು ಅಥವಾ ಇತರ ಪಾರಂಪರಿಕ ಅರಣ್ಯವಾಸಿಗಳು ರೂಢಿಗತವಾಗಿ ಅನುಭವಿಸುತ್ತಿರುವ ಯಾವುದೇ ಇತರ ಪಾರಂಪರಿಕ ಹಕ್ಕುಗಳು.

(ಎಂ) 2005ರ ಡಿಸೆಂಬರ್ 13ಕ್ಕೆ ಮುಂಚೆ ಅನುಸೂಚಿತ ಬುಡಕಟ್ಟುಗಳನ್ನು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳನ್ನು ಅವರ ಪುನರ್ ವಸತಿಯ ಕಾನೂನು ಹಕ್ಕನ್ನು ಮಾನ್ಯ ಮಾಡದೇ ಯಾವುದೇ ವರ್ಣನೆಯ ಅರಣ್ಯ ಜಮೀನಿನಿಂದ ಕಾನೂನುಬಾಹಿರವಾಗಿ ಹೊರಹಾಕಿರುವ ಅಥವಾ ಸ್ಥಳಾಂತರಿಸಿರುವ ಪ್ರಕರಣಗಳಲ್ಲಿ ಪರ್ಯಾಯ ಜಮೀನೂ ಸೇರಿದಂತೆ ಅಲ್ಲಿಯೇ ಪುನರ್ ವಸತಿ ಹಕ್ಕು.

(2) ಅರಣ್ಯ (ಸಂರಕ್ಷಣಾ) ಅಧಿನಿಯಮ, 1980(1980ರ 69)ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ನಿರ್ವಹಿಸುವ ಈ ಮುಂದಿನ ಸೌಲಭ್ಯಗಳಿಗಾಗಿ ಪ್ರತಿ ಹೆಕ್ಟೇರ್‌ಗೆ ಎಪ್ಪತ್ತೈದು ಮರಗಳನ್ನು ಮೀರದಂತೆ ಕಡಿಯುವುದಕ್ಕೆ ಅವಕಾಶವಿರುವ ಅರಣ್ಯ ಜಮೀನನ್ನು ಬಿಟ್ಟುಕೊಡಲು ಅವಕಾಶ ಕಲ್ಪಿಸತಕ್ಕದ್ದು, ಎಂದರೆ:–

(ಎ) ಶಾಲೆಗಳು;

(ಬಿ) ಔಷಧಾಲಯ ಅಥವಾ ಆಸ್ಪತ್ರೆಗಳು;

(ಸಿ) ಅಂಗನವಾಡಿಗಳು;

(ಡಿ) ನ್ಯಾಯ ಬೆಲೆ ಅಂಗಡಿಗಳು;

(ಇ) ವಿದ್ಯುತ್ ಹಾಗೂ ದೂರವಾಣಿ ಸಂಪರ್ಕಗಳು;

(ಎಫ್) ಕೆರೆಗಳು ಮತ್ತು ಇತರ ಸಣ್ಣ ಜಲನಿಕಾಯಗಳು;

(ಜಿ) ಕುಡಿಯುವ ನೀರು ಸರಬರಾಜು ಮತ್ತು ನೀರಿನ ಕೊಳವೆ ಮಾರ್ಗಗಳು;

(ಹೆಚ್) ನೀರು ಅಥವಾ ಮಳೆ ನೀರು ಕೊಯ್ಲು ನಿರ್ಮಿತಿಗಳು;

(ಐ) ಸಣ್ಣ ನೀರಾವರಿ ಕಾಲುವೆಗಳು;

(ಜೆ) ಸಾಂಪ್ರದಾಯಿಕವಲ್ಲದ ಇಂಧನ ಮೂಲ;

(ಕೆ) ಕೌಶಲ್ಯ ವರ್ಧನೆ ಅಥವಾ ವೃತ್ತಿ ತರಬೇತಿ ಕೇಂದ್ರಗಳು;

(ಎಲ್) ರಸ್ತೆಗಳು ಮತ್ತು;

(ಎಂ) ಸಮುದಾಯ ಕೇಂದ್ರಗಳು:

**ಪರಂತು,**

(i) ಈ ಉಪಪ್ರಕರಣದಲ್ಲಿ ನಮೂದಿಸಲಾದ ಉದ್ದೇಶಗಳಿಗಾಗಿ ಬಿಟ್ಟು ಕೊಡಬೇಕಾದ ಅರಣ್ಯ ಜಮೀನು, ಪ್ರತಿಯೊಂದು ಪ್ರಕರಣದಲ್ಲಿ ಒಂದು ಹೆಕ್ಟೇರ್‌ಗಿಂತ ಕಡಿಮೆಯಿದ್ದರೆ; ಮತ್ತು

(ii) ಅಂಥ ಅಭಿವೃದ್ಧಿ ಯೋಜನೆಗಳಿಗೆ ಒಪ್ಪಿಗೆ ಕೊಡುವುದು,ಅದಕ್ಕೆ ಗ್ರಾಮ ಸಭೆಯು ಶಿಫಾರಸ್ಸು ಮಾಡಿರಬೇಕೆಂಬ ಷರತ್ತಿಗೆ ಒಳಪಟ್ಟಿದ್ದರೆ ಮಾತ್ರವೇ ಅರಣ್ಯ ಜಮೀನನ್ನು ಹಾಗೆ ಬಿಟ್ಟು ಕೊಡುವುದಕ್ಕೆ ಅನುಮತಿಸತಕ್ಕದ್ದು.

# ಅಧ್ಯಾಯ –III

## ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವುದು, ಪೂರ್ವ ಸ್ಥಿತಿಗೆ ತರುವುದು ಮತ್ತು ನಿಹಿತಗೊಳಿಸುವುದು ಮತ್ತು ಸಂಬಂಧಿತ ವಿಷಯಗಳು

4. **ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವುದು ಮತ್ತು ನಿಹಿತಗೊಳಿಸುವುದು** – (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು,–

(ಎ) 3ನೇ ಪ್ರಕರಣದಲ್ಲಿ ನಮೂದಿಸಿದ ಎಲ್ಲಾ ಅರಣ್ಯ ಹಕ್ಕುಗಳ ಸಂಬಂಧದಲ್ಲಿ ಯಾವ ರಾಜ್ಯಗಳಲ್ಲಿರುವ ಅಥವಾ ರಾಜ್ಯಗಳಲ್ಲಿನ ಪ್ರದೇಶಗಳಲ್ಲಿರುವ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳೆಂದು ಘೋಷಿಸಲಾಗಿದೆಯೋ ಆ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ;

(ಬಿ) 3ನೇ ಪ್ರಕರಣದಲ್ಲಿ ನಮೂದಿಸಿದ ಎಲ್ಲಾ ಅರಣ್ಯ ಹಕ್ಕುಗಳ ಸಂಬಂಧದಲ್ಲಿ ಇತರ ಪಾರಂಪರಿಕ ಅರಣ್ಯ ವಾಸಿಗಳ

– ಅರಣ್ಯ ಹಕ್ಕುಗಳನ್ನು ಈ ಮೂಲಕ ಮಾನ್ಯ ಮಾಡುತ್ತದೆ ಮತ್ತು ಅವುಗಳನ್ನು ಅವರಲ್ಲಿ ನಿಹಿತಗೊಳಿಸುತ್ತದೆ.

(2) ರಾಷ್ಟ್ರೀಯ ಉದ್ಯಾನವನಗಳಲ್ಲಿ ಮತ್ತು ಅಭಯಾರಣ್ಯಗಳಲ್ಲಿ ಅಪಾಯದಲ್ಲಿರುವ ವನ್ಯ ಜೀವಿಗಳ ಅವಾಸಸ್ಥಳಗಳಲ್ಲಿ ಈ ಅಧಿನಿಯಮದ ಮೇರೆಗೆ ಮಾನ್ಯ ಮಾಡಿದ ಅರಣ್ಯ ಹಕ್ಕುಗಳನ್ನು ತರುವಾಯ ಮಾರ್ಪಾಟುಗೊಳಿಸಬಹುದು ಅಥವಾ ಪುನರ್ ಇತ್ಯರ್ಥಗೊಳಿಸಬಹುದು. ಪರಂತು, ಯಾರೇ ಅರಣ್ಯ ಹಕ್ಕುದಾರರಿಗೆ ಪುನರ್ ವ್ಯವಸ್ಥೆ ಕಲ್ಪಿಸತಕ್ಕದ್ದಲ್ಲ ಅಥವಾ ಈ ಮುಂದಿನ ಷರತ್ತುಗಳು ಈಡೇರಿದ್ದ ಸಂದರ್ಭದಲ್ಲಿ ಹೊರತು, ವನ್ಯಜೀವಿ ಸಂರಕ್ಷಣೆಗಾಗಿ ಅತಿಕ್ರಮಣ ಮಾಡಲಾಗದ ಪ್ರದೇಶಗಳನ್ನು ಸೃಜಿಸುವ ಉದ್ದೇಶಗಳಿಗಾಗಿ ಯಾವುದೇ ರೀತಿಯಲ್ಲಿ ಅವರ ಹಕ್ಕುಗಳಿಗೆ ಬಾಧೆಯುಂಟು ಮಾಡತಕ್ಕದ್ದಲ್ಲ, ಎಂದರೆ:–

(ಎ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಹಕ್ಕುಗಳ ಮಾನ್ಯತೆಯ ಮತ್ತು ನಿಹಿತತೆಯ ಪ್ರಕ್ರಿಯೆಯನ್ನು ಪರ್ಯಾಲೋಚನೆಯಲ್ಲಿರುವ ಎಲ್ಲಾ ಪ್ರದೇಶಗಳಲ್ಲಿ ಪೂರ್ಣಗೊಳಿಸಲಾಗಿದೆ;

(ಬಿ) ವನ್ಯ ಜೀವಿಗಳ ಮೇಲೆ ಹಕ್ಕುಗಳನ್ನು ಹೊಂದಿರುವವರ ಚಟುವಟಿಕೆಗಳು ಅಥವಾ ಅವರ ಉಪಸ್ಥಿತಿಯ ಪರಿಣಾಮಗಳಿಂದ ಸರಿಪಡಿಸಲಾಗದ ಹಾನಿಯನ್ನು ಉಂಟು ಮಾಡುತ್ತವೆಂದು ಮತ್ತು ಸದರಿ ಜಾತಿಗಳ ಮತ್ತು ಅವುಗಳ ಆ ವಾಸಸ್ಥಳಗಳ ಅಸ್ತಿತ್ವಕ್ಕೆ ಬೆದರಿಕೆ ಒಡ್ಡುತ್ತಿವೆಯೆಂದು ವನ್ಯಜೀವಿ(ರಕ್ಷಣಾ) ಅಧಿನಿಯಮ, 1972ರಡಿಯಲ್ಲಿ ತನ್ನ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಸರ್ಕಾರದ ಸಂಬಂಧಪಟ್ಟ ಏಜೆನ್ಸಿಗಳು ಇದನ್ನು ರುಜುವಾತುಪಡಿಸಿವೆ.

(ಸಿ) ಸಹ–ಅಸ್ತಿತ್ವದಂಥ ಇತರೆ ಯುಕ್ತ ಆಯ್ಕೆಗಳು ಲಭ್ಯವಿರುವುದಿಲ್ಲವೆಂದು ರಾಜ್ಯ ಸರ್ಕಾರವು ನಿರ್ಣಯಿಸಿದೆ.

(ಡಿ) ಬಾಧಿತ ವ್ಯಕ್ತಿಗಳಿಗೆ ಮತ್ತು ಸಮುದಾಯಗಳಿಗೆ ಸುಭದ್ರ ಜೀವನೋಪಾಯವನ್ನು ಒದಗಿಸಲು ಮತ್ತು ಸಂಬಂಧಪಟ್ಟ ಕಾನೂನುಗಳಲ್ಲಿ ಮತ್ತು ಕೇಂದ್ರ ಸರ್ಕಾರದ ನೀತಿಯಲ್ಲಿ ಹೇಳಿರುವಂತೆ ಅಂಥ ಬಾಧಿತ ವ್ಯಕ್ತಿಗಳ ಹಾಗೂ ಸಮುದಾಯಗಳ ಅಗತ್ಯತೆಗಳನ್ನು ಪೂರೈಸುವಂಥ ಪುನರ್ ವ್ಯವಸ್ಥೆ ಅಥವಾ ಪರ್ಯಾಯ ಪ್ಯಾಕೇಜ್‌ಗಳನ್ನು ಸಿದ್ಧಪಡಿಸಲಾಗಿದೆ ಮತ್ತು ತಿಳಿಸಲಾಗಿದೆ;

(ಇ) ಪ್ರಸ್ತಾವಿತ ಪುನರ್ ವ್ಯವಸ್ಥೆಗೆ ಮತ್ತು ಪ್ಯಾಕೇಜಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಇರುವ ಗ್ರಾಮಸಭೆಗಳ, ಮುಕ್ತ ಪೂರ್ವ ಸೂಚಿತ ಸಮ್ಮತಿಯನ್ನು ಲಿಖಿತದಲ್ಲಿ ಪಡೆಯಲಾಗಿದೆ;

(ಎಫ್) ಯಾವುದೇ ಪುನರ್ ವ್ಯವಸ್ಥೆಯನ್ನು ವಾಗ್ದಾನ ಮಾಡಿದ ಪ್ಯಾಕೇಜಿನ ಪ್ರಕಾರ, ಪುನರ್ ವ್ಯವಸ್ಥೆ ಕಲ್ಪಿಸುವ ಪ್ರದೇಶದಲ್ಲಿನ ಸೌಲಭ್ಯಗಳು ಮತ್ತು ಭೂ ಹಂಚಿಕೆಯು ಪೂರ್ಣಗೊಳ್ಳುವವರೆಗೆ ಕೈಗೊಳ್ಳತಕ್ಕದ್ದಲ್ಲ;

ಪರಂತು, ಅಪಾಯದಲ್ಲಿರುವ ವನ್ಯಜೀವಿಗಳ ಯಾವ ವಾಸಸ್ಥಳಗಳಿಂದ ವನ್ಯಜೀವಿಯ ಸಂರಕ್ಷಣೆಯ ಉದ್ದೇಶಗಳಿಗಾಗಿ, ಹಕ್ಕುದಾರರನ್ನು ಆ ರೀತಿ ಪುನರ್ ಸ್ಥಳಾಂತರಿಸಲಾಗಿದೆಯೋ ಈ ವಾಸ ಸ್ಥಳಗಳನ್ನು ಇತರ ಉಪಯೋಗಗಳಿಗೆ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸಕಾರವು ಅಥವಾ ಯಾವುದೇ ಇತರ ಸಂಸ್ಥೆಯು ಬದಲಾಯಿಸತಕ್ಕದ್ದಲ್ಲಿ.

(3) ಅರಣ್ಯ ಜಮೀನು ಮತ್ತು ಅವರ ಅವಾಸಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳಿಗೆ ಈ ಅಧಿನಿಯಮದ ಮೇರೆಗೆ ಅರಣ್ಯ ಮಾನ್ಯತೆ ಮತ್ತು ನಿಹಿತಗೊಳಿಸುವಿಕೆಯು, ಅಂತಹ ಅನುಸೂಚಿತ

ಬುಡಕಟ್ಟಿಗಳು ಅಥವಾ ಬುಡಕಟ್ಟು ಸಮುದಾಯಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು 13ನೇ ಡಿಸೆಂಬರ್ 2005 ಮುಂಚೆ ಅರಣ್ಯ ಜಮೀನಿನ ಅಧಿಭೋಗದಲ್ಲಿದ್ದರೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

(4) 1ನೇ ಉಪಪ್ರಕರಣದಿಂದ ಪ್ರದತ್ತವಾದ ಹಕ್ಕು ಅನುವಂಶಿಯವಾಗಿರತಕ್ಕದ್ದು. ಆದರೆ ಪರಭಾರೆ ಮಾಡುವಂಥದ್ದಾಗಿರತಕ್ಕದ್ದಲ್ಲ ಅಥವಾ ವರ್ಗಾವಣೆ ಮಾಡುವಂಥದ್ದಾಗಿರತಕ್ಕದ್ದಲ್ಲ ಮತ್ತು ವಿವಾಹಿತ ವ್ಯಕ್ತಿಗಳ ಸಂದರ್ಭದಲ್ಲಿ ಗಂಡ ಹೆಂಡತಿ ಇಬ್ಬರ ಹೆಸರಿನಲ್ಲಿ ಜಂಟಿಯಾಗಿ ನೋಂದಾಯಿಸತಕ್ಕದ್ದು ಮತ್ತು ಒಬ್ಬನೇ ಮುಖ್ಯಸ್ಥನಾಗಿರುವ ಕುಟುಂಬದ ಸಂದರ್ಭದಲ್ಲಿ ಆ ವ್ಯಕ್ತಿಯ ಹೆಸರಿನಲ್ಲಿ ನಿಕಟ ರಕ್ತ ಸಂಬಂಧಿಗೆ ವರ್ಗಾಯಿಸತಕ್ಕದ್ದು;

(5) ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾರೇ ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ವ್ಯಕ್ಯಿಯನ್ನು ಅಥವಾ ಇತರ ಪಾರಂಪರಿಕ ಅರಣ್ಯವಾಸಿಯ ಮಾನ್ಯತೆ ಮತ್ತು ಪರಿಶೀಲನಾ ಪ್ರಕ್ರಿಯೆಯು ಪೂರ್ಣವಾಗುವವರೆಗೆ, ಅವನ ಅಧಿಭೋಗದಲ್ಲಿರುವ ಅರಣ್ಯ ಜಮೀನಿನಿಂದ ಅವನನ್ನು ಒಕ್ಕಲೆಬ್ಬಿಸತಕ್ಕದ್ದಲ್ಲ ಅಥವಾ ಹೊರಹಾಕತಕ್ಕದ್ದಲ್ಲ;

(6) 1ನೇ ಉಪಪ್ರಕರಣದಿಂದ ಮಾನ್ಯ ಮಾಡಿರುವ ಮತ್ತು ನಿಹಿತಗೊಳಿಸಿದ ಅರಣ್ಯ ಹಕ್ಕುಗಳು 3ನೇ ಪ್ರಕರಣ(1)ನೇ ಉಪ ಪ್ರಕರಣದ(ಎ) ಖಂಡದಲ್ಲಿ ನಮೂದಿಸಿರುವ ಜಮೀನಿಗೆ ಸಂಬಂಧಿಸಿದ್ದಲ್ಲಿ, ಅಂತಹ ಜಮೀನು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ವ್ಯಕ್ತಿಯ ಅಥವಾ ಕುಟುಂಬದ ಅಂಥವಾ ಸಮುದಾಯದ ಅಧಿಬೋಗದಲ್ಲಿರತಕ್ಕದ್ದು ಮತ್ತು ವಾಸ್ತವಿಕ ಅಧಿಭೋಗದಲ್ಲಿರುವ ಪ್ರದೇಶಕ್ಕೆ ಸೀಮಿತವಗಿರತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ನಾಲ್ಕು ಹೆಕ್ಟೇರ್ ಪ್ರದೇಶವನ್ನು ಮೀರತಕ್ಕದ್ದಲ್ಲ;

(7) ಅರಣ್ಯ ಹಕ್ಕುಗಳನ್ನು, ಅರಣ್ಯ(ಸಂರಕ್ಷಣಾ) ಅಧಿನಿಯಮ, 1980ರ(1980ರ 69) ಅಡಿಯಲ್ಲಿನ ಒಪ್ಪಿಗೆ, ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದಂತಹವುಗಳನ್ನು ಹೊರತುಪಡಿಸಿ, 'ನಿವ್ವಳ ಪ್ರಸ್ತುತ ಮೌಲ್ಯ'ದ ಸಂದಾಯ ಮತ್ತು ಅರಣ್ಯ ಭೂಮಿಯನ್ನು ಬೇರೆ ಉದ್ದೇಶಕ್ಕೆ ಕೊಟ್ಟಿದ್ದರಿಂದ "ಪರಿಹಾರಾತ್ಮಕ ವನ ನಿರ್ಮಾಣ"ದ ಅಗತ್ಯತೆಯೂ ಒಳಗೊಂಡಂತೆ ಎಲ್ಲಾ ಪೂರ್ವಾದಿಗಳಿಂದ ಮತ್ತು ಪ್ರಕ್ರಿಯಾ ಅಗತ್ಯತೆಗಳಿಂದ ಮುಕ್ತಗೊಳಿಸಿ ಪ್ರದಾನ ಮಾಡತಕ್ಕದ್ದು;

(8) ಈ ಅಧಿನಿಯಮದ ಅಡಿಯಲ್ಲಿ ಮಾನ್ಯ ಮಾಡಿದ ಮತ್ತು ನಿಹಿತಗೊಳಿಸಿದ ಅರಣ್ಯ ಹಕ್ಕುಗಳು ರಾಜ್ಯ ಅಭಿವೃದ್ಧಿ ಆವಿಷ್ಕಾರಗಳಿಂದಾಗಿ ಭೂ ನಷ್ಟ ಪರಿಹಾರವನ್ನು

ಪಡೆಯದೆ ತಮ್ಮ ವಾಸಸ್ಥಳದಿಂದ ಮತ್ತು ಸಾಗುವಳಿಯಿಂದ ಸ್ಥಳಾಂತರಿಸಲ್ಪಟ್ಟವರೆಂದು ಮತ್ತು ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಆರ್ಜನೆ ಮಾಡಿಕೊಳ್ಳಲಾಯಿತೋ ಈ ಉದ್ದೇಶಕ್ಕಾಗಿ ಸದರಿ ಆರ್ಜನೆಯನ್ನು ಐದು ವರ್ಷಗಳ ಒಳಗೆ ಉಪಯೋಗಿಸದಿರುವುದನ್ನು ರುಜುವಾತುಪಡಿಸುವ ಅರಣ್ಯ ವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಭೂಮಿ ಹಕ್ಕನ್ನು ಒಳಗೊಂಡಿರತಕ್ಕದ್ದು.

(5) **ಅರಣ್ಯ ಹಕ್ಕುಧಾರಕರ ಕರ್ತವ್ಯಗಳು:–** ಯಾವುದೇ ಅರಣ್ಯ ಹಕ್ಕಿನ ಧಾರಕರಿಗೆ, ಈ ಅಧಿನಿಯಮದ ಮೇರೆಗೆ, ಯಾವ ಪ್ರದೇಶಗಳಲ್ಲಿ ಯಾವುದೇ ಅರಣ್ಯ ಹಕ್ಕಿನ ಧಾರಕರು ಇರುತ್ತಾರೋ ಆ ಪ್ರದೇಶಗಳಲ್ಲಿರುವ ಗ್ರಾಮಸಭೆಗೆ ಮತ್ತು ಗ್ರಾಮಮಟ್ಟದ ಸಂಸ್ಥೆಗಳಿಗೆ,–

(ಎ) ವನ್ಯಜೀವಿಗಳನ್ನು, ಅರಣ್ಯವನ್ನು ಮತ್ತು ಜೈವಿಕ ವೈವಿಧ್ಯತೆಯನ್ನು ರಕ್ಷಿಸುವುದಕ್ಕೆ;

(ಬಿ) ಅಕ್ಕಪಕ್ಕದ ಜಲಾನಯನ ಪ್ರದೇಶಗಳನ್ನು, ನೀರಿನ ಸಂಪನ್ಮೂಲಗಳನ್ನು ಮತ್ತು ಇತರ ಜೀವಿಪರಿಸ್ಥಿತಿಯ ಸೂಕ್ಷ್ಮ ಪ್ರದೇಶಗಳನ್ನು ಸಮರ್ಪಕವಾಗಿ ಸಂರಕ್ಷಿಸಲಾಗಿದೆಯೆಂದು ಖಚಿತಪಡಿಸಿಕೊಳ್ಳುವುದಕ್ಕೆ;

(ಸಿ) ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ವಾಸಸ್ಥಳವನ್ನು ಅವರ ಸಾಂಸ್ಕೃತಿಕ ಮತ್ತು ಸಹಜ ಪರಂಪರೆಗೆ ಬಾಧಕವಾಗುವ ಯಾವುದೇ ವಿನಾಶಕಾರಿ ಪದ್ಧತಿಗಳ ಯಾವುದೇ ವಿಧಾನದಿಂದ ಸಂರಕ್ಷಿಸಲಾಗಿದೆಯೆಂದು ಖಚಿತಪಡಿಸಿಕೊಳ್ಳುವುದಕ್ಕೆ;

(ಡಿ) ಸಮುದಾಯ ಅರಣ್ಯ ಸಂಪನ್ಮೂಲ ಬಳಕೆಯನ್ನು ನಿಯಂತ್ರಿಸಲು ಮತ್ತು ವನ್ಯಪ್ರಾಣಿಗಳು, ಅರಣ್ಯ ಮತ್ತು ಜೈವಿಕ ವೈವಿಧ್ಯತೆಗೆ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡುವ ಯಾವುದೇ ಚಟುವಟಿಕೆಯನ್ನು ನಿಲ್ಲಿಸಲು ಗ್ರಾಮ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಪಾಲಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಅಧಿಕಾರ ನೀಡಲಾಗಿದೆ.

# ಅಧ್ಯಾಯ –IV

# ಅರಣ್ಯ ಹಕ್ಕುಗಳನ್ನು ಮಾನ್ಯ ನಿಹಿತಗೊಳಿಸುವ ಪ್ರಾಧಿಕಾರಗಳು ಮತ್ತು ಪ್ರಕ್ರಿಯೆ

6. (1) ಗ್ರಾಮ ಸಭೆಯು, ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಇರುವ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳಿಗೆ ನೀಡಬಹುದಾದ ವೈಯಕ್ತಿಕ ಅಥವಾ ಸಮುದಾಯದ ಅಥವಾ ಅವೆರಡರ ಅರಣ್ಯ ಹಕ್ಕುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವುದಕ್ಕಾಗಿ, ಕ್ಲೇಮುಗಳನ್ನು ಸ್ವೀಕರಿಸುವ ಮೂಲಕ, ಅವುಗಳನ್ನು ಕ್ರೋಢೀಕರಿಸುವ ಮತ್ತು ಪರಿಶೀಲಿಸುವ ಮೂಲಕ ಮತ್ತು ಅಂಥ ಹಕ್ಕುಗಳನ್ನು ಚಲಾಯಿಸಲು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಶಿಫಾರಸ್ಸು ಮಾಡಿದ ಪ್ರತಿಯೊಂದು ಕ್ಲೇಮಿನ ಪ್ರದೇಶವನ್ನು ರೇಖಾಚಿತ್ರದಲ್ಲಿ ನಕ್ಷೆಯನ್ನು ಸಿದ್ಧಪಡಿಸುವ ಮೂಲಕ ಗ್ರಾಮ ಸಭೆಯು ಈ ಪ್ರಕ್ರಿಯೆಯನ್ನು ಪ್ರಾರಂಭಿಸುವ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಆ ಗ್ರಾಮ ಸಭೆಯು ತರುವಾಯ, ಆ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸತಕ್ಕದ್ದು ಮತ್ತು ತದನಂತರ ಅವರ ಒಂದು ಪ್ರತಿಯನ್ನು ಉಪ–ವಿಭಾಗ ಮಟ್ಟದ ಸಮಿತಿಗೆ ಕಳುಹಿಸತಕ್ಕದ್ದು.

(2) ಗ್ರಾಮ ಸಭೆಯ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು (3) ನೇ ಉಪಪ್ರಕರಣದ ಮೇರೆಗೆ ರಚಿತವಾದ ಉಪ–ವಿಭಾಗ ಮಟ್ಟದ ಸಮಿತಿಗೆ ಒಂದು ಅರ್ಜಿಯನ್ನು, ಸಲ್ಲಿಸಬಹುದು ಮತ್ತು ಆ ಉಪ–ವಿಭಾಗ ಮಟ್ಟದ ಸಮಿತಿಯು ಅಂಥ ಅರ್ಜಿಯನ್ನು ಪರಿಶೀಲಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು:

ಪರಂತು, ಗ್ರಾಮ ಸಭೆಯು ನಿರ್ಣಯವನ್ನು ಅಂಗೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಅಂಥ ಪ್ರತಿಯೊಂದು ಅರ್ಜಿಯನ್ನು ಅಲ್ಲಿಸತಕ್ಕದ್ದು:

ಮತ್ತೂ ಪರಂತು, ಅಂಥ ಅರ್ಜಿಯನ್ನು, ಅವನ ವಾದವನ್ನು ಮಂಡಿಸುವುದಕ್ಕೆ ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಬಾಧಿತ ವ್ಯಕ್ತಿಯ ವಿರುದ್ಧ ವಿಲೆ ಮಾಡತಕ್ಕದ್ದಲ್ಲ.

(3) ರಾಜ್ಯ ಸರ್ಕಾರವು, ಗ್ರಾಮ ಸಭೆಯು ಅಂಗೀಕರಿಸಿದ ನಿರ್ಣಯವನ್ನು ಪರಿಶೀಲಿಸಲು ಒಂದು ಉಪ–ವಿಭಾಗ ಮಟ್ಟದ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅರಣ್ಯ ಹಕ್ಕುಗಳ ದಾಖಲೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅಂತಿಮ ತೀರ್ಮಾನಕ್ಕಾಗಿ ಉಪವಿಭಾಗೀಯ ಅಧಿಕಾರಿಯ ಮುಖಾಂತರ ಜಿಲ್ಲಾಮಟ್ಟದ ಸಮಿತಿಗೆ ಕಳುಹಿಸತಕ್ಕದ್ದು.

(4) ಉಪ–ವಿಭಾಗ ಮ ಟ್ಟದ ಸಮಿತಿಯ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಉಪ–ವಿಭಾಗ ಮಟ್ಟದ ಸಮಿತಿಯ ನಿರ್ಣಯದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಜಿಲ್ಲಾ ಮಟ್ಟದ ಸಮಿತಿಗೆ ಅರ್ಜಿ ಸಲ್ಲಿಸಬಹುದು ಮತ್ತು ಆ ಜಿಲ್ಲಾಮಟ್ಟದ ಸಮಿತಿಯ ಅಂಥ ಅರ್ಜಿಯನ್ನು ಪರಿಶೀಲಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

ಪರಂತು, ಗ್ರಾಮ ಸಭೆಯ ನಿರ್ಣಯದ ವಿರುದ್ಧ ಅರ್ಜಿಯನ್ನು ಉಪ–ವಿಭಾಗ ಮಟ್ಟದ ಸಮಿತಿಯ ಮುಂದೆ ಸಲ್ಲಿಸಿದ್ದ ಹೊರತು ಮತ್ತು ಅದು ಪರ್ಯಾಲೋಚಿಸಿದ್ದ ಹೊರತು, ನೇರವಾಗಿ ಜಿಲ್ಲಾ ಮಟ್ಟದ ಸಮಿತಿಯ ಮುಂದೆ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

ಮತ್ತೂ ಪರಂತು, ಅಂಥ ಅರ್ಜಿಯನ್ನು, ಭಾದಿತ ವ್ಯಕ್ತಿಯು ತನ್ನ ವಾದವನ್ನು ಮಂಡಿಸಲು ಸಮಂಜಸ ಅವಕಾಶವನ್ನು ಅವನಿಗೆ ನೀಡಿದ್ದ ಹೊರತು, ಅವನ ವಿರುದ್ಧವಾಗಿ ವಿಲೆ ಮಾಡತಕ್ಕದ್ದಲ್ಲ.

(5) ರಾಜ್ಯ ಸರ್ಕಾರವು, ಉಪ–ವಿಭಾಗ ಮಟ್ಟದ ಸಮಿತಿಯು ಸಿದ್ಧಪಡಿಸಿದ ಅರಣ್ಯ ಹಕ್ಕುಗಳ ದಾಖಲೆಯನ್ನು ಪರಿಶೀಲಿಸುವುದಕ್ಕಾಗಿ ಮತ್ತು ಅದನ್ನು ಅಂತಿಮವಾಗಿ ಅನುಮೋದಿಸುವುದಕ್ಕಾಗಿ ಜಿಲ್ಲಾಮಟ್ಟದ ಸಮಿತಿಯನ್ನು ರಚಿಸತಕ್ಕದ್ದು.

(6) ಅರಣ್ಯ ಹಕ್ಕಿನ ದಾಖಲೆಯ ಮೇಲಿನ ಜಿಲ್ಲಾ ಮಟ್ಟದ ಸಮಿತಿಯ ನಿರ್ಣಯವು ಅಂತಿಮವಾದುದಾಗಿರತಕ್ಕದ್ದು ಮತ್ತು ಬಂಧನಕಾರಿಯಾಗಿರತಕ್ಕದ್ದು.

(7) ರಾಜ್ಯ ಸರ್ಕಾರವು, ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಮತ್ತು ನಿಹಿತಗೊಳಿಸುವ ಪ್ರಕ್ರಿಯೆಯ ಉಸ್ತವಾರಿ ನೋಡಿಕೊಳ್ಳಲು ಮತ್ತು ಸಂಪರ್ಕ ಏಜೆನ್ಸಿಗೆ ಆ ಏಜೆನ್ಸಿಯು ಕೋರಬಹುದಾದಂಥ ವಿವರಪಟ್ಟಿಕೆಗಳನ್ನು ಮತ್ತು ವರದಿಗಳನ್ನು ಸಲ್ಲಿಸಲು ರಾಜ್ಯಮಟ್ಟದ ಉಸ್ತವಾರಿ ಸಮಿತಿಯನ್ನು ರಚಿಸತಕ್ಕದ್ದು.

(8) ಉಪ–ವಿಭಾಗ ಮಟ್ಟದ ಸಮಿತಿಯಲ್ಲಿ, ಜಿಲ್ಲಾ ಮಟ್ಟದ ಸಮಿತಿಯಲ್ಲಿ ಮತ್ತು ರಾಜ್ಯಮಟ್ಟದ ಉಸ್ತುವಾರಿ ಸಮಿತಿಯಲ್ಲಿ, ರಾಜ್ಯ ಸರ್ಕಾರದ ಕಂದಾಯ, ಅರಣ್ಯ ಮತ್ತು ಬುಡಕಟ್ಟು ವ್ಯವಹಾರಗಳ ಇಲಾಖೆಗಳ ಅಧಿಕಾರಗಳು ಮತ್ತು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳು ನೇಮಕ ಮಾಡಿದ, ಆಯಾ ಮಟ್ಟದ ಪಂಚಾಯತ್ ರಾಜ್ ಸಂಸ್ಥೆಗಳ ಮೂವರು ಸದಸ್ಯರು ಇರತಕ್ಕದ್ದು, ಗೊತ್ತುಪಡಿಸಬಹುದಾದಂತೆ ಆ ಪೈಕಿ ಇಬ್ಬರು ಅನುಸೂಚಿತ ಬುಡಕಟ್ಟಿನ ಸದಸ್ಯರಾಗಿರತಕ್ಕದ್ದು ಮತ್ತು ಅವರಲ್ಲಿ ಕನಿಷ್ಠ ಪಕ್ಷ ಒಬ್ಬರು ಮಹಿಳೆ ಇರತಕ್ಕದ್ದು.

(9) ಉಪ–ವಿಭಾಗ ಮಟ್ಟದ ಸಮಿತಿಯು, ಜಿಲ್ಲಾಮಟ್ಟದ ಸಮಿತಿಯ ಮತ್ತು ರಾಜ್ಯಮಟ್ಟದ ಉಸ್ತುವಾರಿ ಸಮಿತಿಗಳ ರಚನೆಯು ಮತ್ತು ಪ್ರಕಾರ್ಯಗಳು ಮತ್ತು ಅವುಗಳ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವು ಅನುಸರಿಸಬೇಕಾದ ಪ್ರಕ್ರಿಯೆಯು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ –V

## ಅಪರಾಧಗಳು ಮತ್ತು ದಂಡನೆಗಳು

7. **ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರಗಳು ಮತ್ತು ಸಮಿತಿಗಳು ಸದಸ್ಯರು ಅಥವಾ ಅಧಿಕಾರಿಗಳು ಮಾಡಿದ ಅಪರಾಧಗಳು:–** ಯಾವುದೇ ಪ್ರಾಧಿಕಾರವು ಅಥವಾ ಸಮಿತಿಯು ಅಥವಾ ಅಂಥ ಪ್ರಾಧಿಕಾರದ ಅಥವಾ ಸಮಿತಿಯ ಅಧಿಕಾರಿಯು ಅಥವಾ ಸದಸ್ಯನು, ಅರಣ್ಯ ಹಕ್ಕುಗಳನ್ನು ಮಾನ್ಯ, ಮಾಡುವುದಕ್ಕೆ ಸಂಬಂಧಿಸಿದ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದಲ್ಲಿ, ಅದು ಅಥವಾ ಅವರು, ಈ ಅಧಿನಿಯಮದ ಮೇರೆಗೆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಆ ಬಗ್ಗೆ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತರಾಗತಕ್ಕದ್ದು.

ಪರಂತು, ಈ ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಾಧಿಕಾರದ ಅಥವಾ ಸಮಿತಿಯ ಯಾರೇ ಸದಸ್ಯನು ಅಥವಾ ಇಲಾಖಾ ಮುಖ್ಯಸ್ಥನು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಸೂಕ್ತವಾದ ಎಲ್ಲಾ ಜಾಗರೂಕತೆಯನ್ನು ತಾನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ ಅವನನ್ನು ಈ ಉಪಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

8. **ಅಪರಾಧಗಳ ಸಂಜ್ಞೇಯತೆ:–** ಯಾವುದೇ ನ್ಯಾಯಾಲಯವು, 7ನೇ ಪ್ರಕರಣದ ಮೇರೆಗೆ ಯಾವುದೇ ಅಪರಾಧದ ಸಂಜ್ಞೇಯತೆಯನ್ನು, ಗ್ರಾಮ ಸಭೆಯ ನಿರ್ಣಯಕ್ಕೆ ಸಂಬಂಧಪಟ್ಟ ವಿವಾದದ ಸಂದರ್ಭದಲ್ಲಿ, ಯಾವುದೇ ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ಅಥವಾ ಯಾವುದೇ ಉನ್ನತ ಪ್ರಾಧಿಕಾರದ ವಿರುದ್ಧ ಗ್ರಾಮ ಸಭೆಯು ನಿರ್ಣಯದ ಮೂಲಕ ಅರವತ್ತು ದಿನಗಳಿಗೆ ಕಡಿಮೆಯಿಲ್ಲದಂತೆ ರಾಜ್ಯಮಟ್ಟದ ಉಸ್ತುವಾರಿ ಸಮಿತಿಗೆ ನೋಟೀಸನ್ನು ನೀಡಿದ್ದ ಹೊರತು ಮತ್ತು ರಾಜ್ಯಮಟ್ಟದ ಉಸ್ತುವಾರಿ ಸಮಿತಿಯು ಅಂಥ ಪ್ರಾಧಿಕಾರದ ವಿರುದ್ಧ ಕ್ರಮ ಜರುಗಿಸಿದ್ದ ಹೊರತು, ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ –VI

## ಸಂಕೀರ್ಣ

**9. ಪ್ರಾಧಿಕಾರಗಳ ಸದಸ್ಯರು, ಮುಂತಾದವರು ಲೋಕ ನೌಕರರಾಗಿರುವುದು:–** ಈ ಅಧಿನಿಯಮದ ಮೇರೆಗೆ ಮತ್ತು ಆ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಚಲಾಯಿಸುವ,IVನೇ ಅದ್ಯಾಯದಲ್ಲಿ ಉಲ್ಲೇಖಿಸಿದ ಪ್ರಾಧಿಕಾರಗಳ ಪ್ರತಿಯೊಬ್ಬ ಸದಸ್ಯನನ್ನು ಹಾಗೂ ಪ್ರತಿಯೊಬ್ಬ ಇತರ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣ ಅರ್ಥದಲ್ಲಿ ಲೋಕ ನೌಕರನೆಂದು ಭಾವಿಸತಕ್ಕದ್ದು.

**10. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ:–** (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಅದರ ಯಾರೇ ಅಧಿಕಾರಿಗಳ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಅದರ ಅಧ್ಯಕ್ಷ, ಸದಸ್ಯರು, ಸದಸ್ಯ–ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರನ್ನೂ ಒಳಗೊಂಡಂತೆ, IVನೇ ಅಧ್ಯಾಯದಲ್ಲಿ ಉಲ್ಲೇಖಿಸಿದ ಯಾವುದೇ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆತನ್ನು ಹೂಡತಕ್ಕದ್ದಲ್ಲ.

**11. ಸಂಪರ್ಕ ಏಜೆನ್ಸಿ :–** ಬುಡಕಟ್ಟು ವ್ಯವಹಾರಗಳನ್ನು ನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯವು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಈ ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ಸಂಪರ್ಕ ಏಜೆನ್ಸಿಯಾಗಿರತಕ್ಕದ್ದು.

**12. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ:–**IVನೇ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಪ್ರಾಧಿಕಾರವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದರ ಕರ್ತವ್ಯಗಳನ್ನು ನಿರ್ವಹಿಸುವಾಗ ಮತ್ತು ಅದರ ಅಧಿಕಾರಗಳನ್ನು ಚಲಾಯಿಸುವಾಗ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

**13. ಈ ಅಧಿನಿಯಮವು ಯಾವುದೇ ಇತರ ಕಾನೂನನ್ನು ಕುಂಠಿತಗೊಳಿಸತಕ್ಕದ್ದಲ್ಲ:–** ಈ ಅಧಿನಿಯಮದಲ್ಲಿ ಮತ್ತು ಪಂಚಾಯತ್ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996 (1996ರ 40) ರ ಉಪಬಂಧಿಸಿರುವುದನ್ನುಳಿದು ಈ ಅಧಿನಿಯಮದ ಉಪಬಂಧಗಳಿಗೆ ಪೂರಕವಾಗಿರತಕ್ಕದ್ದು ಮತ್ತು ಅವುಗಳನ್ನು ಕುಂಠಿತಗೊಳಿಸತಕ್ಕದ್ದಲ್ಲ.

**14. ನಿಯಮಗಳನ್ನು ರಚಿಸಲು ಅಧಿಕಾರ:–**(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಷ್ಠಾನಕ್ಕಾಗಿ ಪ್ರಕ್ರಿಯಾ ವಿವರಗಳು;

(ಬಿ) 6ನೇ ಪ್ರಕರಣದ 1ನೇ ಉಪಪ್ರಕರಣದ ಮೇರೆಗಿನ ಅರಣ್ಯ ಹಕ್ಕುಗಳನ್ನು ಚಲಾಯಿಸುವುಕ್ಕಾಗಿ ಕ್ಲೇಮುಗಳನ್ನು ಸ್ವೀಕರಿಸುವುದು, ಕ್ರೋಡೀಕರಿಸುವುದು ಮತ್ತು ಅವುಗಳನ್ನು ಪರಿಶೀಲಿಸುವುದು ಮತ್ತು ಶಿಫಾರಸ್ಸು ಮಾಡಿದ ಪ್ರತಿ ಕ್ಲೇಮಿನ ಪ್ರದೇಶವನ್ನು ನಿರೂಪಿಸುವ ನಕ್ಷೆಯನ್ನು ಸಿದ್ಧಪಡಿಸುವ ಪ್ರಕ್ರಿಯೆ ಮತ್ತು ಆ ಪ್ರಕರಣ 2ನೇ ಉಪಪ್ರಕರಣದ ಮೇರೆಗೆ ಉಪವಿಭಾಗೀಯ ಸಮಿತಿಗೆ ಅರ್ಜಿ ಸಲ್ಲಿಸುವ ರೀತಿ;

(ಸಿ) 6ನೇ ಪ್ರಕರಣದ 8ನೇ ಉಪಪ್ರಕರಣದ ಮೇರೆಗೆ ಉಪ–ವಿಭಾಗ ಮಟ್ಟದ ಸಮಿತಿಯ ಜಿಲ್ಲಾಮಟ್ಟದ ಸಮಿತಿಯ ಹಾಗೂ ರಾಜ್ಯಮಟ್ಟದ ಉಸ್ತುವಾರಿ ಸಮಿತಿಯ ಸದಸ್ಯರಾಗಿ ನೇಮಕಗೊಳ್ಳಬೇಕಾದ ರಾಜ್ಯ

ಸರ್ಕಾರದ ಕಂದಾಯ, ಅರಣ್ಯ ಮತ್ತು ಬುಡಕಟ್ಟು ವ್ಯವಹಾರಗಳ ಇಲಾಖೆಯ ಅಧಿಕಾರಿಗಳ ಮಟ್ಟ;

(ಡಿ) ಉಪ–ವಿಭಾಗ ಮಟ್ಟದ ಸಮಿತಿಯ, ಜಿಲ್ಲಾ ಮಟ್ಟದ ಸಮಿತಿಯ ಮತ್ತು ರಾಜ್ಯಮಟ್ಟದ ಉಸ್ತುವಾರಿ ಸಮಿತಿಯ ರಚನೆ ಮತ್ತು ಅವುಗಳ ಪ್ರಕಾರ್ಯಗಳು ಮತ್ತು 6ನೇ ಪ್ರಕರಣದ 9ನೇ ಉಪ ಪ್ರಕರಣದ ಮೇರೆಗೆ ಅವುಗಳು ತಮ್ಮ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಇ) ಅಗತ್ಯಪಡಿಸಬೇಕಾದ ಅಥವಾ ಗೊತ್ತುಪಡಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಈ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

# ಬುಡಕಟ್ಟು ವ್ಯವಹಾರಗಳ ಮಂತ್ರಾಲಯ

## ಅಧಿಸೂಚನೆ

**ನವದೆಹಲಿ, 1ನೇ ಜನವರಿ, 2008**

**ಜಿ.ಎಸ್.ಆರ್.1**(ಇ) – ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007ರ 2) ರ 14ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಕರಡು ನಿಯಮಗಳು, 2007ನ್ನು ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್.437, ದಿನಾಂಕ 19/6/2007, ಭಾರತ ರಾಜ್ಯಪತ್ರದ ಭಾಗII, ವಿಭಾಗ3, ಉಪವಿಭಾಗ(1)ರಲ್ಲಿ ಪ್ರಕಟಿಸಿ, ಆನಿಯಮಗಳಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ, ಸದರಿ ಅಧಿಸೂಚನೆಯನ್ನೊಳಗೊಂಡಿರುವ ರಾಜ್ಯಪತ್ರದ ಪ್ರತಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದ ದಿನಾಂಕದಿಂದ ನಲವತ್ತೈದು ದಿನಗಳ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಆಕ್ಷೇಪಣೆಗಳನ್ನು ಹಾಗೂ ಸಲಹೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ಸದರಿ ರಾಜಪತ್ರದ ಪ್ರತಿಗಳನ್ನು ದಿನಾಂಕ 25–06–2007ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳ ಸಂಬಂಧದಲ್ಲಿ ಸಾರ್ವಜನಿಕರಿಂದ ಸ್ವೀಕರಿಸಿದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಕೇಂದ್ರ ಸರ್ಕಾರವು ಕ್ರಮಬದ್ಧವಾಗಿ ಪರ್ಯಾಲೋಚಿಸಿರುವುದರಿಂದ;

ಕೇಂದ್ರ ಸರ್ಕಾರವು, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007ರ 14ನೇ ಪ್ರಕರಣದ (1)ನೇ ಮತ್ತು (2)ನೇ ಉಪಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಅಂಥ ಅರಣ್ಯಗಳಲ್ಲಿ ವಾಸಿಸುವ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮತ್ತು ಅರಣ್ಯ ಜಮೀನಿನಲ್ಲಿ ಅವರ ಅಧಿಭೋಗವನ್ನು ಮಾನ್ಯ ಮಾಡುವುದಕ್ಕಾಗಿ ಮತ್ತು ಅವುಗಳನ್ನು ಅವರಲ್ಲಿ ನಿಹಿತಗೊಳಿಸುವುದಕ್ಕಾಗಿ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:**

(1) ಈ ನಿಯಮಗಳನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ನಿಯಮಗಳು, 2007 ಎಂದು ಕರೆಯತಕ್ಕದ್ದು.

(2) ಇವುಗಳು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇವುಗಳು, ಸರ್ಕಾರಿ ರಾಜಪತ್ರದಲ್ಲಿ ಅವುಗಳ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು –** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:–

(ಎ) ‘ಅಧಿನಿಯಮ” ಎಂದರೆ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006(2007ರ 2) ಎಂದು ಅರ್ಥ;

(ಬಿ) “ವಾಸ್ತವಿಕ ಜೀವನೋಪಾಯ ಅಗತ್ಯತೆಗಳು” ಎಂದರೆ ಅಧಿನಿಯಮದ 3ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) (ಸಿ) ಮತ್ತು (ಡಿ) ಖಂಡಗಳಲ್ಲಿ ಉಪಬಂಧಿಸಿದಂತೆ, ಅರಣ್ಯ ಭೂಮಿಯ ಸ್ವಂತ ಸಾಗುವಳಿಯಿಂದ ಬಂದ ಉತ್ಪಾದನೆಯ ಮೂಲಕ ಅಥವಾ ಉತ್ಪನ್ನದ ಮಾರಾಟದ ಮೂಲಕ ತನ್ನ ಹಾಗೂ ಕುಟುಂಬದ ಜೀವನಾಧಾರ ಅಗತ್ಯತೆಗಳ ಪೂರೈಕೆ ಎಂದು ಅರ್ಥ;

(ಸಿ) “ಕ್ಲೇಮುದಾರ” ಎಂದರೆ, ಅಧಿನಿಯಮದಲ್ಲಿ ಪಟ್ಟಿ ಮಾಡಿದ ಯಾವುದೇ ಹಕ್ಕುಗಳನ್ನು ಮಾನ್ಯ ಮಾಡಲು ಮತ್ತು ನಿಹಿತಗೊಳಿಸಲು ಕ್ಲೇಮು ಮಾಡಿದ ವ್ಯಕ್ತಿ, ವ್ಯಕ್ತಿಗಳ ಸಮೂಹ, ಕುಟುಂಬ ಅಥವಾ ಸಮುದಾಯ ಎಂದು ಅರ್ಥ.

(ಡಿ) ಈ ಅಧಿನಿಯಮದ 3ನೇ ಪ್ರಕರಣ (1)ನೇ ಉಪಪ್ರಕರಣದ(ಸಿ) ಖಂಡದ ಮೇರೆಗೆ” ಸಣ್ಣ ಅರಣ್ಯ ಉತ್ಪನ್ನದ ವಿಲೆ” ಎಂಬುದು, ಜೀವನೋಪಾಯಕ್ಕಾಗಿ ಉತ್ಪನ್ನವನ್ನು ಸಂಗ್ರಹಿಸುವವನು ಅಥವಾ ಸಮುದಾಯವು ಅಂಥ ಉತ್ಪನ್ನದ ಬಳಕೆಗಾಗಿ ಅಥವಾ ಮಾರಾಟಕ್ಕಾಗಿ

ಸ್ಥಳೀಯ ಮಟ್ಟದಲ್ಲಿ ಸಂಸ್ಕರಣೆ ಮಾಡುವುದನ್ನು, ಮೌಲ್ಯ ವರ್ಧನೆಯನ್ನು, ಅರಣ್ಯ ಪ್ರದೇಶದಲ್ಲಿ ತಲೆ ಮೇಲೆ ಹೊರುವುದರ, ಸೈಕಲ್ಲುಗಳ ಮತ್ತು ಕೈಬಂಡಿಗಳ ಮೂಲಕ ಸಾಗಣೆ ಮಾಡುವುದನ್ನು ಒಳಗೊಂಡಿರತಕ್ಕದ್ದು;

(ಇ) "ಅರಣ್ಯ ಹಕ್ಕುಗಳ ಸಮಿತಿ" ಎಂದರೆ, 3ನೇ ನಿಯಮದ ಮೇರೆಗೆ ಗ್ರಾಮ ಸಭೆಯು ರಚಿಸಿದ ಸಮಿತಿ ಎಂದು ಅರ್ಥ;

(ಎಫ್) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ ಎಂದು ಅರ್ಥ;

(2) ಈ ನಿಯಮಗಳಲ್ಲಿ ಬಳಸಿರುವ ಮತ್ತು ಪರಿಭಾಷಿಸಿಲ್ಲದ ಆದರೆ ಅಧಿನಿಯಮದಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗು ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿದ ಅರ್ಥಗಳನ್ನೇ ಹೊಂದಿರತಕ್ಕದ್ದು;

**3. ಗ್ರಾಮ ಸಭೆ :** (1) ಗ್ರಾಮ ಪಂಚಾಯಿತಿಯು ಗ್ರಾಮ ಸಬೆಗಳನ್ನು ಕರೆಯತಕ್ಕದ್ದು ಮತ್ತು ಅದರ ಪ್ರಥಮ ಸಭೆಯಲ್ಲಿ, ತನ್ನ ಸದಸ್ಯರುಗಳ ಪೈಕಿ ಹತ್ತಕ್ಕಿಂತ ಕಡಿಮೆಯಿರದ ಆದರೆ ಹದಿನೈದಕ್ಕೆ ಮೀರದ ವ್ಯಕ್ತಿಗಳನ್ನು ಅರಣ್ಯ ಹಕ್ಕುಗಳ ಸಮಿತಿಯ ಸದಸ್ಯರನ್ನಾಗಿ ಚುನಾಯಿಸತಕ್ಕದ್ದು, ಅವರಲ್ಲಿ ಕೊನೇ ಪಕ್ಷ ಮೂರನೇ ಒಂದು ಭಾಗದಷ್ಟು ಸದಸ್ಯರು ಅನುಸೂಚಿತ ಬುಡಕಟ್ಟಿಗೆ ಸೇರಿದವರಾಗಿರತಕ್ಕದ್ದು;

ಪರಂತು, ಅಂಥ ಸದಸ್ಯರ ಮೂರನೇ ಒಂದು ಭಾಗದಷ್ಟು ಮಹಿಳಾ ಸದಸ್ಯರಿರತಕ್ಕದ್ದು;

ಮತ್ತು ಪರಂತು, ಅನುಸೂಚಿತ ಬುಡಕಟ್ಟುಗಳ ಸದಸ್ಯರಿಲ್ಲದಿರುವಲ್ಲಿ, ಕೊನೇ ಪಕ್ಷ ಅಂಥ ಸದಸ್ಯರ ಮೂರನೇ ಒಂದು ಭಾಗದಷ್ಟು ಮಹಿಳಾ ಸದಸ್ಯರಿರತಕ್ಕದ್ದು.

(2) ಅರಣ್ಯ ಹಕ್ಕುಗಳ ಸಮಿತಿಯು, ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಬಗ್ಗೆ ನಿರ್ಣಯಿಸತಕ್ಕದ್ದು ಮತ್ತು ಅದನ್ನು ಉಪವಿಭಾಗೀಯ ಮಟ್ಟದ ಸಮಿತಿಗೆ ತಿಳಿಸತಕ್ಕದ್ದು.

(3) ಅರಣ್ಯ ಹಕ್ಕುಗಳ ಸಮಿತಿಯ ಸದಸ್ಯನು ತನ್ನದೇ ಆದ ಅರಣ್ಯ ಹಕ್ಕಿನ ಕ್ಲೇಮುದಾರನು ಸಹ ಆಗಿದ್ದಲ್ಲಿ, ಅವನು ಆ ಬಗ್ಗೆ ಸಮಿತಿಗೆ ತಿಳಿಸತಕ್ಕದ್ದು ಮತ್ತು ಅವನ ಕ್ಲೇಮನ್ನು ಪರಿಶೀಲಿಸುವಗ ಪರಿಶೀಲನಾ ವ್ಯವಹರಣೆಗಳಲ್ಲಿ ಭಗವಹಿಸತಕ್ಕದ್ದಲ್ಲ.

**4. ಗ್ರಾಮ ಸಭೆಯ ಪ್ರಕಾರ್ಯಗಳು: (1)** ಗ್ರಾಮ ಸಭೆಯು,–

(ಎ) ಅರಣ್ಯ ಹಕ್ಕುಗಳ ಸ್ವರೂಪವನ್ನು ಮತ್ತು ವ್ಯಾಪ್ತಿಯನ್ನು ನಿರ್ಧರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು, ಅದಕ್ಕೆ ಸಂಬಂಧಿಸಿದ ಕ್ಲೇಮುಗಳನ್ನು ಸ್ವೀಕರಿಸತಕ್ಕದ್ದು ಮತ್ತು ವಿಚಾರಣೆಯನ್ನು ನಡೆಸತಕ್ಕದ್ದು;

(ಬಿ) ಅರಣ್ಯ ಹಕ್ಕುಗಳ ಕ್ಲೇಮುದಾರರ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ಆದೇಶದ ಮೂಲಕ ನಿರ್ಧರಿಸಬಹುದಾದಂತೆ ಕ್ಲೇಮುದಾರರ ಮತ್ತು ಅವರ ಕ್ಲೇಮುಗಳ ಅಂಥ ವಿವರಗಳನ್ನೊಳಗೊಂಡಿರುವ ಒಂದು ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದ್ದು;

(ಸಿ) ಅರಣ್ಯ ಹಕ್ಕುಗಳ ಸಂಬಂಧದಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಯುಕ್ತ ಅವಕಾಶ ನೀಡಿದ ತರುವಾಯ ಅರಣ್ಯ ಹಕ್ಕುಗಳ ಕ್ಲೇಮಿನ ಮೇಲೆ ಠರಾವನ್ನು ಅಂಗೀಕರಿಸತಕ್ಕದ್ದು ಮತ್ತು ಉಪವಿಭಗೀಯ ಮಟ್ಟದ ಸಮಿತಿಗೆ ಅದನ್ನು ಕಳುಹಿಸತಕ್ಕದು;

(ಡಿ) ಅಧಿನಿಯಮದ 4ನೇ ಪ್ರಕರಣ(2)ನೇ ಉಪಪ್ರಕರಣ (ಇ) ಖಂಡದ ಮೇರೆಗೆ ಪುನರ್ವಸತಿ ಪ್ಯಾಕೇಜುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಸೂಕ್ತ ಠರಾವುಗಳನ್ನು ಅಂಗೀಕರಿಸತಕ್ಕದ್ದು; ಮತ್ತು

(ಇ) ಅಧಿನಿಯುಮದ 5ನೇ ಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ವನ್ಯಜೀವಿ, ಅರಣ್ಯ ಮತ್ತು ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ ತನ್ನ ಸದಸ್ಯರ ಪೈಕಿಯಿಂದ ಸಮಿತಿಗಳನ್ನು ರಚಿಸತಕ್ಕದ್ದು.

(2) ಗ್ರಾಮ ಸಭಾದ ಸಬೆಯ ಕೋರಂ ಆ ಗ್ರಾಮ ಸಭೆಯ ಸರ್ವ ಸದಸ್ಯರ ಮೂರನೇ ಎರಡು ಭಾಗಕ್ಕಿಂತ ಕಡಿಮೆಯಿರತಕ್ಕದ್ದಲ್ಲ,

ಪರಂತು, ಯಾವುದೇ ಗ್ರಾಮದಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಅನುಸೂಚಿತವಲ್ಲದ ಬುಟಕಟ್ಟುಗಳ ಎಲ್ಲ ವಿಧದ ಜನಸಂಖ್ಯೆಯಿದ್ದಾಗ, ಅನುಸೂಚಿತ ಬುಡಕಟ್ಟಿನ, ಪ್ರಾಚೀನ ಬುಡಕಟ್ಟು ಗುಂಪುಗಳ ಮತ್ತು ಕೃಷಿ ಪೂರ್ವ ಸಮುದಾಯಗಳ ಸದಸ್ಯರು ಸಾಕಷ್ಟು ಸಂಖ್ಯೆಯಲ್ಲಿ ಪ್ರತಿನಿಧಿತವಾಗತಕ್ಕದ್ದು.

3) ಗ್ರಾಮ ಸಭೆಗೆ ರಾಜ್ಯದಲ್ಲಿರುವ ಪ್ರಾಧಿಕಾರಗಳು ಅವಶ್ಯಕ ನೆರವನ್ನು ಒದಗಿಸತಕ್ಕದ್ದು.

**5. ಉಪ–ವಿಭಾಗೀಯ ಮಟ್ಟದ ಸಮಿತಿ:** ರಾಜ್ಯ ಸರ್ಕಾರವು, ಈ ಕೆಳಕಂಡ ಸದಸ್ಯರಿರುವ ಉಪವಿಭಾಗೀಯ ಮಟ್ಟದ ಸಮಿತಿಯನ್ನು ರಚಿಸತಕ್ಕದ್ದು ಎಂದರೆ:–

(ಎ) ಉಪ ವಿಭಾಗಾಧಿಕಾರಿ ಅಥವಾ ತತ್ಸಮಾನ ಅಧಿಕಾರಿ ಅಧ್ಯಕ್ಷ

(ಬಿ) ಉಪ ವಿಭಾಗದ ಪ್ರಭಾರದಲ್ಲಿರುವ ಅರಣ್ಯಾಧಿಕಾರಿ

ಅಥವಾ ತತ್ಸಮಾನ ಅಧಿಕಾರಿ ಸದಸ್ಯ;

(ಸಿ) ಜಿಲ್ಲಾ ಪಂಚಾಯಿತಿಯ ನಾಮನಿರ್ದೇಶನ ಮಾಡುವ ಕ್ಷೇತ್ರ ಅಥವಾ ತಹಸೀಲ್ ಮಟ್ಟದ ಪಂಚಾಯತಿಗಳ ಮುವರು ಸದಸ್ಯರು ಇವರಲ್ಲಿ ಅರಣ್ಯ ವಾಸಿಗಳಾಗಿರುವವರಿಗೆ ಆದ್ಯತೆ ನೀಡಿ, ಅಥವಾ ಪ್ರಾಚೀನ ಬುಡಕಟ್ಟು ಗುಂಪುಗಳಿಗೆ ಸೇರಿದ ಅನುಸೂಚಿತ ಬುಡಕಟ್ಟಿನ ಇಬ್ಬರು ಸದಸ್ಯರು ಇರತಕ್ಕದ್ದು ಮತ್ತು ಅನುಸೂಚಿತ ಬುಡಕಟ್ಟುಗಳ ಸದಸ್ಯರು ಇಲ್ಲದಿದ್ದರೆ, ಇತರ ಪಾರಂಪರಿಕ ಅರಣ್ಯ ವಾಸಿಗಳಾಗಿರುವವರಿಗೆ ಆದ್ಯತೆ ನೀಡಿ ಇಬ್ಬರು ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯೆ ಇರತಕ್ಕದ್ದು, ಅಥವಾ ಸಂವಿಧಾನದ ಆರನೇ ಅನುಸೂಚಿಯಲ್ಲಿ ಹೇಳಿರುವ ಪ್ರದೇಶಗಳಲ್ಲಿ ಸ್ವಾಯತ್ತ ಜಿಲ್ಲಾ ಪರಿಷತ್ತಿನಿಂದ ಅಥವಾ ಪ್ರಾದೇಶಿಕ ಪರಿಷತ್ತಿನಿಂದ ಅಥವಾ ಇತರ ಸೂಕ್ತವಲಯ ಮಟ್ಟದಿಂದ ನಾಮನಿರ್ದೇಶನಗೊಂಡ ಮೂವರು ಸದಸ್ಯರು

–ಅವರಲ್ಲಿ ಕೊನೇ ಪಕ್ಷ ಒಬ್ಬ ಮಹಿಳಾ ಸದಸ್ಯ ಇರತಕ್ಕದ್ದು ಮತ್ತು

(ಡಿ) ಉಪ ವಿಭಾಗದ ಪ್ರಭಾರದಲ್ಲಿರುವ ಬುಡಕಟ್ಟು ಕಲ್ಯಾಣ ಇಲಾಖೆಯ ಒಬ್ಬರು ಅಧಿಕಾರಿ ಅಥವಾ ಅಂಥ ಅಧಿಕಾರಿಯು ಲಭ್ಯವಾಗದಿದ್ದರೆ, ಬುಡಕಟ್ಟು ವ್ಯವಹಾರಗಳ ಪ್ರಭಾರದಲ್ಲಿರುವ ಅಧಿಕಾರಿ.

**6. ಉಪ ವಿಭಾಗೀಯ ಮಟ್ಟದ ಸಮಿತಿಯ ಪ್ರಕಾರ್ಯಗಳು:** ಉಪ ವಿಭಾಗೀಯ ಮಟ್ಟದ ಸಮಿತಿಯು,–

(ಎ) ಉಳಿಸಿಕೊಳ್ಳುವುದು ಮತ್ತು ಸಂರಕ್ಷಿಸುವುದು ಅಗತ್ಯಾವಾಗಿರುವ ಅಪರೂಪದ ಸಸ್ಯಸಂಕುಲಕ್ಕೆ ಮತ್ತು ಪ್ರಾಣಿಸಂಕುಲಕ್ಕೆ ಒತ್ತು ನೀಡಿ ವನ್ಯಜೀವಿ. ಅರಣ್ಯ ಮತ್ತು ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ ಗ್ರಾಮ ಸಭೆಗೆ ಇರುವ ಕರ್ತವ್ಯಗಳ ಬಗ್ಗೆ ಮತ್ತು ಅರಣ್ಯ ಹಕ್ಕುಗಳ ಧಾರಕರ ಮತ್ತು ಇತರರ ಕರ್ತವ್ಯಗಳ ಬಗ್ಗೆ ಪ್ರತಿಯೊಂದು ಗ್ರಾಮ ಸಭೆಗೆ ಮಾಹಿತಿಯನ್ನು ಒದಗಿಸತಕ್ಕದ್ದ;

(ಬಿ) ಅರಣ್ಯ ಮತ್ತು ಕಂದಾಯ ಭೂಪಟಗಳನ್ನು ಮತ್ತು ಮತದಾರರ ಪಟ್ಟಿಯನ್ನು ಗ್ರಾಮಸಭೆ ಅಥವಾ ಅರಣ್ಯ ಹಕ್ಕುಗಳ ಸಮಿತಿಗೆ ಒದಗಿಸತಕ್ಕದ್ದು;

(ಸಿ) ಸಂಬಂಧಪಟ್ಟ ಗ್ರಾಮ ಸಬೆಗಳ ಎಲ್ಲ ನಿರ್ಣಯಗಳನ್ನು ಪರೀಕ್ಷಿಸತಕ್ಕದ್ದು;

(ಡಿ) ಗ್ರಾಮ ಸಬೆಗಳು ಒದಗಿಸಿದ ಭೂಪಟಗಳನ್ನು ಮತ್ತು ವಿವರಗಳನ್ನು ಕ್ರೋಢೀಕರಿಸತಕ್ಕದ್ದು.

(ಇ) ಕ್ಲೇಮುಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಗ್ರಾಮ ಸಬೆಗಳ ನಿರ್ಣಯಗಳನ್ನು ಮತ್ತು ಭೂಪಟವನ್ನು ಪರಿಶೀಲಿಸುವುದು;

(ಎಫ್) ಯಾವುದೇ ಅರಣ್ಯ ಹಕ್ಕುಗಳ ಸ್ವರೂಪ ಮತ್ತು ವ್ಯಾಪ್ತಿಯ ಸಂಬಂಧದಲ್ಲಿ ಗ್ರಾಮ ಸಭೆಗಳ ನಡುವಣ ವಿವಾದಗಳನ್ನು ವಿಚಾರಣೆ ಮಾಡಿ ನ್ಯಾಯ ನಿರ್ಣಯ ಮಾಡತಕ್ಕದ್ದು;

(ಜೆ) ಗ್ರಾಮ ಸಭೆಗಳ ನಿರ್ಣಯಗಳಿಂದ ಬಾಧಿತರಾದ, ರಾಜ್ಯ ಏಜೆನ್ಸಿಗಳೂ ಒಳಗೊಂಡಂತೆ, ವ್ಯಕ್ತಿಗಳು ಸಲ್ಲಿಸಿದ ಅರ್ಜಿಗಳ ಬಗ್ಗೆ ವಿಚಾರಣೆ ಮಾಡತಕ್ಕದ್ದು;

(ಹೆಚ್) ಅಂತರ ಉಪ ವಿಭಾಗೀಯ ಮಟ್ಟದ ಸಮಿತಿಗಳೊಂದಿಗೆ ಸಮನ್ವಯ ಕಾರ್ಯ ಕೈಗೊಳ್ಳತಕ್ಕದ್ದು;

(ಐ) ಸರ್ಕಾರಿ ದಾಖಲೆಗಳೊಂದಿಗೆ ಹೊಂದಾಣಿಕೆ ಮಾಡಿದ ತರುವಾಯ ಉದ್ದೇಶಿತ ಅರಣ್ಯ ಹಕ್ಕುಗಳ ಕರಡು ದಾಖಲೆಯನ್ನು ವಿಭಾಗವಾರು ಅಥವಾ ತಹಸೀಲ್‌ವಾರು ಸಿದ್ಧಪಡಿಸತಕ್ಕದ್ದು;

(ಜೆ) ಕ್ಲೇಮುಗಳನ್ನು ಪ್ರಸ್ತಾವಿತ ಅರನ್ಯ ಹಕ್ಕುಗಳ ಕರಡು ದಾಖಲೆಯೊಂದಿಗೆ ಅಂತಿಮ ತೀರ್ಮಾನಕ್ಕಾಗಿ ಉಪ ವಿಭಾಗಾಧಿಕಾರಿಯ ಮೂಲಕ ಜಿಲ್ಲಾ ಮಟ್ಟದ ಸಮಿತಿಗೆ ಕಳುಹಿಸತಕ್ಕದ್ದು;

(ಕೆ) ಅಧಿನಿಯಮದಲ್ಲಿ ಮತ್ತು ನಿಯಮಗಳಲ್ಲಿ ಹೇಳಿರುವ ಉದ್ದೇಶಗಳು ಮತ್ತು ಪ್ರಕ್ರಿಯೆಗಳ ಬಗ್ಗೆ ಅರಣ್ಯ ವಾಸಿಗಳಲ್ಲಿ ಜಾಗೃತಿ ಮೂಡಿಸತಕ್ಕದ್ದು;

(ಎಲ್) ಕ್ಲೇಮುದಾರರಿಗೆ, ಈ ನಿಯಮಗಳ ಅನುಬಂಧ Iರಲ್ಲಿ (ನಮೂನೆ–ಎ ಮತ್ತು ಬಿ) ನೀಡಿರುವ ಕ್ಲೇಮುಗಳ ನಮೂನೆಯು ಸುಲಭವಾಗಿ ಮತ್ತು ಉಚಿತವಾಗಿ ದೊರಕುವಂತೆ ನೋಡಿಕೊಳ್ಳತಕ್ಕದ್ದು;

(ಎಂ) ಗ್ರಾಮ ಸಭಾದ ಸಭೆಗಳು ಅಗತ್ಯ ಕೋರಂದೊಂದಿಗೆ ಮುಕ್ತವಾಗಿ, ನ್ಯಾಯ ಸಮ್ಮತವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

7) **ಜಿಲ್ಲಾ ಮಟ್ಟದ ಸಮಿತಿ –** ರಾಜ್ಯ ಸರ್ಕಾರವು, ಈ ಕೆಳಕಂಡಂತೆ ಸದಸ್ಯರಿರುವ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:–

ಎ) ಜಿಲ್ಲಾ ಕಲೆಕ್ಟರು ಅಥವಾ ಜಿಲ್ಲಾಧಿಕಾರಿ – ಅಧ್ಯಕ್ಷ;

ಬಿ) ಸಂಬಂಧಪಟ್ಟ ವಿಭಾಗೀಯ ಅರಣ್ಯಾಧಿಕಾರಿ ಅಥವಾ ಅರಣ್ಯ ಉಪ ಸಂರಕ್ಷಣಾಧಿಕಾರಿ – ಸದಸ್ಯ;

ಸಿ) ಜಿಲ್ಲಾ ಪಂಚಾಯಿತಿಯು ನಾಮ ನಿರ್ದೇಶನ ಮಾಡುವ ಜಿಲ್ಲಾ ಪಂಚಾಯಿತಿಯು ಮೂವರು ಸದಸ್ಯರು ಇವರಲ್ಲಿ, ಅರಣ್ಯವಾಸಿಗಳಾಗಿರುವವರಿಗೆ ಆದ್ಯತೆ ನೀಡಿ ಅಥವಾ ಪ್ರಾಚೀನ ಬುಡಕಟ್ಟು ಗುಂಪುಗಳಿಗೆ ಸೇರಿದ ಅನುಸೂಚಿತ ಬುಡಕಟ್ಟಿಗೆ ಸೇರಿದ ಇಬ್ಬರು ಸದಸ್ಯರಿರತಕ್ಕದ್ದು ಮತ್ತು ಅನುಸೂಚಿತ ಬುಡಕಟ್ಟುಗಳ ಸದಸ್ಯರು ಇಲ್ಲದಿದ್ದರೆ, ಇತರ ಪಾರಂಪರಿಕ ಅರಣ್ಯವಾಸಿಗಳಾಗಿರುವವರಿಗೆ ಆದ್ಯತೆ ನೀಡಿ ಇಬ್ಬರು ಸದಸ್ಯರು ಮತ್ತು ಅವರಲ್ಲಿ ಒಬ್ಬ ಮಹಿಳಾ ಸದಸ್ಯೆ ಇರತಕ್ಕದ್ದು ಅಥವಾ ಸಂವಿಧಾನದ ಆರನೇ ಅನುಸೂಚಿಯಲ್ಲಿ ಹೇಳಿರುವ ಪ್ರದೇಶಗಳಲ್ಲಿ, ಸ್ವಾಯತ್ತ ಜಿಲ್ಲಾ ಪರಿಷತ್ತಿನಿಂದ ಅಥವಾ ಪ್ರಾದೇಶಿಕ ಪರಿಷತ್‌ನಿಂದ ನಾಮನಿರ್ದೇಶನಗೊಂಡ ಮೂವರು ಸದಸ್ಯರು, ಅವರಲ್ಲಿ ಕೊನೆ ಪಕ್ಷ ಒಬ್ಬ ಮಹಿಳಾ ಸದಸ್ಯೆ ಇರತಕ್ಕದ್ದು ಮತ್ತು

ಡಿ) ಬುಡಕಟ್ಟು ಕಲ್ಯಾಣ ಇಲಾಖೆಯ ಜಿಲ್ಲೆಯ ಪ್ರಭಾರದಲ್ಲಿರುವ, ಅಧಿಕಾರಿ ಅಥವಾ ಅಂಥ ಅಧಿಕಾರಿಯು ಲಭ್ಯವಾಗದಿದ್ದರೆ, ಬುಡಕಟ್ಟು ವ್ಯವಹಾರಗಳ ಪ್ರಭಾರದಲ್ಲಿರುವ ಅಧಿಕಾರಿ

8. **ಜಿಲ್ಲಾ ಮಟ್ಟದ ಸಮಿತಿಯ ಪ್ರಕಾರ್ಯಗಳು –** ಜಿಲ್ಲಾ ಮಟ್ಟದ ಸಮಿತಿಯು,–

ಎ) 6ನೇ ನಿಯಮದ (ಬಿ) ಖಂಡದ ಮೇರೆಗೆ ಅಗತ್ಯ ಮಾಹಿತಿಯನ್ನು ಗ್ರಾಮ ಸಭೆಗೆ ಅಥವಾ

–ಅರಣ್ಯ ಹಕ್ಕು ಸಮಿತಿಗೆ ಒದಗಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಬಿ) ಎಲ್ಲಾ ಕ್ಲೇಮುಗಳನ್ನು, ವಿಶೇಷವಾಗಿ ಪ್ರಾಚೀನ ಬುಡಕಟ್ಟು ಗುಂಪುಗಳ, ದನಗಾಹಿಗಳ ಮತ್ತು ಅಲೆಮಾರಿ ಬುಡಕಟ್ಟುಗಳ ಕ್ಲೇಮುಗಳನ್ನು ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸತಕ್ಕದ್ದು;

(ಸಿ) ಕ್ಲೇಮುಗಳನ್ನು ಮತ್ತು ಉಪವಿಭಾಗಿಯ ಮಟ್ಟದ ಸಮಿತಿಯು ಸಿದ್ಧಪಡಿಸಿದ ಅರಣ್ಯ ಹಕ್ಕುಗಳ ದಾಖಲೆಯನ್ನು ಪರಿಶೀಲಿಸತಕ್ಕದ್ದು ಮತ್ತು ಅಂತಿಮವಾಗಿ ಅನುಮೋದಿಸತಕ್ಕದ್ದು;

(ಡಿ) ಉಪ ವಿಭಾಗೀಯ ಮಟ್ಟದ ಸಮಿತಿಯ ಆದೇಶಗಳಿಂದ ಬಾಧಿತರಾದ ವ್ಯಕ್ತಿಗಳ ಅರ್ಜಿಗಳ ವಿಚಾರಣೆ ಮಾಡತಕ್ಕದ್ದು;

(ಇ) ಅಂತರ–ಜಿಲ್ಲಾ ಕ್ಲೇಮುಗಳಿಗೆ ಸಂಬಂಧಪಟ್ಟಂತೆ ಇತರ ಜಿಲ್ಲೆಗಳೊಡನೆ ಸಮನ್ವಯ ಕಾರ್ಯ ಕೈಗೊಳ್ಳತಕ್ಕದ್ದು;

(ಎಫ್) ಹಕ್ಕು ದಾಖಲೆಯನ್ನೂ ಒಳಗೊಂಡಂತೆ, ಅರಣ್ಯ ಹಕ್ಕುಗಳನ್ನು ಸಂಬಂಧಪಟ್ಟ ಸರ್ಕಾರಿ ದಾಖಲೆಗಳಲಿ ಸೇರಿಸುವುದಕ್ಕೆ ನಿರ್ದೇಶನಗಳನ್ನು ನೀಡತಕ್ಕದ್ದು;

(ಜಿ) ಅಂತಿಮಗೊಳಿಸಬಹುದಾದಂತೆ ಅರಣ್ಯ ಹಕ್ಕುಗಳ ದಾಖಲೆಗಳ ಪ್ರಕಟಣೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಹೆಚ್) ಅಧಿನಿಯಮದ ಮೇರೆಗೆ ಅರಣ್ಯ ಹಕ್ಕುಗಳ ಮತ್ತು ಹಕ್ಕುಪತ್ರದ ಪ್ರಮಾಣಿತ ಪ್ರತಿಯನ್ನು ಈ ನಿಯಮಗಳ ಅನುಬಂಧ IIಮತ್ತು IIIರಲ್ಲಿ ನಿರ್ದಿಷ್ಟಪಡಿಸಲಾದಂತೆ ಅನುಕ್ರಮವಾಗಿ ಸಂಬಂಧಪಟ್ಟ ಕ್ಲೇಮುದಾರನಿಗೆ ಮತ್ತು ಗ್ರಾಮ ಸಭೆಗೆ ಒದಗಿಸಲಾಗಿದೆಂಬುದನ್ನು ಖಚಿತಪಡಿಸಕೊಳ್ಳತಕ್ಕದ್ದು.

9. **ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ–** ರಾಜ್ಯ ಸರ್ಕಾರವು, ಈ ಕೆಳಗಿನ ಸದಸ್ಯರನ್ನೊಳಗೊಂಡ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:–

| | | |
|---|---|---|
| (ಎ) | ಮುಖ್ಯ ಕಾರ್ಯದರ್ಶಿ– | ಅಧ್ಯಕ್ಷ; |
| (ಬಿ) | ಕಾರ್ಯದರ್ಶಿ, ಕಂದಾಯ ಇಲಾಖೆ– | ಸದಸ್ಯ; |
| (ಸಿ) | ಕಾರ್ಯದರ್ಶಿ, ಬುಡಕಟ್ಟು ಅಥವಾ ಸಮಾಜ ಕಲ್ಯಾಣ ಇಲಾಖೆ– | ಸದಸ್ಯ; |
| (ಡಿ) | ಕಾರ್ಯದರ್ಶಿ, ಅರಣ್ಯ ಇಲಾಖೆ– | ಸದಸ್ಯ; |
| (ಇ) | ಕಾರ್ಯದರ್ಶಿ, ಪಂಚಾಯತ್ ರಾಜ್– | ಸದಸ್ಯ; |
| (ಎಫ್) | ಅರಣ್ಯಗಳ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ– | ಸದಸ್ಯ; |

(ಜಿ) ಬುಡಕಟ್ಟುಗಳ ಸಲಹಾ ಪರಿಷತ್ತಿನ ಅಧ್ಯಕ್ಷರಿಂದ ನಾಮ ನಿರ್ದೇಶನಗೊಂಡ, ಬುಡಕಟ್ಟುಗಳ ಸಲಹಾ ಪರಿಷತ್ತಿನ ಮೂವರು ಅನುಸೂಚಿತ ಬುಡಕಟ್ಟುಗಳ ಸದಸ್ಯರು ಮತ್ತು ಬುಡಕಟ್ಟುಗಳ ಸಲಹಾ ಪರಿಷತ್ತು ಇಲ್ಲದಿರುವಲ್ಲಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರು ಅನುಸೂಚಿತ ಬುಡಕಟ್ಟುಗಳ ಸದಸ್ಯರು,

(ಹೆಚ್) ಆಯುಕ್ತರು, ಬುಡಕಟ್ಟು ಕಲ್ಯಾಣ ಅಥವಾ ತತ್ಸಮಾನ ಅಧಿಕಾರಿಯು– ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

**10. ರಾಜ್ಯಮಟ್ಟದ ಉಸ್ತುವಾರಿ ಸಮಿತಿಯ ಪ್ರಕಾರ್ಯಗಳು–** ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯು,–

(ಎ) ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಮತ್ತು ನಿಹಿತಗೊಳಿಸುವ ಪ್ರಕ್ರಿಯೆಯನ್ನು ಉಸ್ತುವಾರಿ ಮಾಡಲು ಮಾನದಂಡಗಳನ್ನು ಮತ್ತು ಸೂಚನೆಗಳನ್ನು ರೂಪಿಸತಕ್ಕದ್ದು;

(ಬಿ) ರಾಜ್ಯದಲ್ಲಿ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ, ಪರಿಶೀಲನೆ ಮಾಡುವ ಮತ್ತು ನಿಹಿತಗೊಳಿಸುವ ಪ್ರಕ್ರಿಯೆಯ ಉಸ್ತುವಾರಿ ಮಾಡತಕ್ಕದ್ದು;

(ಸಿ) ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ, ಪರಿಶೀಲನೆ ಮಾಡುವ ಮತ್ತು ನಿಹಿತಗೊಳಿಸುವ ಪ್ರಕ್ರಿಯೆಯ ಬಗ್ಗೆ ಷಣ್ಮಾಸಿಕ ವರದಿಯನ್ನು ಒದಗಿಸತಕ್ಕದ್ದು ಮತ್ತು ಸಂಪರ್ಕ ಏಜೆನ್ಸಿಯು ಕೇಳಬಹುದಾದಂಥ ವಿವರಪಟ್ಟಿಕೆಗಳನ್ನು ಮತ್ತು ವರದಿಗಳನ್ನು ಸಂಪರ್ಕ ಏಜೆನ್ಸಿಗೆ ಸಲ್ಲಿಸತಕ್ಕದ್ದು;

(ಡಿ) ಅಧಿನಿಯಮದ 8ನೇ ಪ್ರಕರಣದಲ್ಲಿ ನಮೂದಿಸಿದ ನೋಟೀಸನ್ನು ಸ್ವೀಕರಿಸಿದ ನಂತರ, ಅಧಿನಿಯಮದ ಮೇರೆಗಿನ ಸಂಬಂಧಪಟ್ಟ ಪ್ರಾಧಿಕಾರಗಳ ವಿರುದ್ಧ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು;

(ಇ) ಅಧಿನಿಯಮದ 4ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಪುನರ್ ಇತ್ಯರ್ಥದ ಬಗ್ಗೆ ಉಸ್ತವಾರಿ ನಡೆಸತಕ್ಕದ್ದು.

**II. ಗ್ರಾಮ ಸಭೆಗೆ ಕ್ಲೇಮುಗಳನ್ನು ಸಲ್ಲಿಸುವ, ಗ್ರಾಮ ಸಭೆಯು ಅವುಗಳನ್ನು ನಿರ್ಧರಿಸುವ ಮತ್ತು ಪರಿಶೀಲಿಸುವ ಪ್ರಕ್ರಿಯೆ :–** (1) ಗ್ರಾಮ ಸಭೆಗಳು

(ಎ) ಕ್ಲೇಮುಗಳನ್ನು ತರಿಸಿಕೊಳ್ಳತಕ್ಕದ್ದು ಮತ್ತು ಈ ನಿಯಮಗಳ ಅನುಬಂಧ–1ರಲ್ಲಿ ಉಪಬಂಧಿಸಲಾದಂಥ ನಮೂನೆಯಲ್ಲಿ ಕ್ಲೇಮುಗಳನ್ನು ಸ್ವೀಕರಿಸುವುದಕ್ಕೆ ಅರಣ್ಯ ಹಕ್ಕುಗಳ ಸಮಿತಿಯನ್ನು ಅಧಿಕೃತಗೊಳಿಸತಕ್ಕದ್ದು ಮತ್ತು ಅಂಥ ಕ್ಲೇಮುಗಳನ್ನು, 13ನೇ ನಿಯಮದಲ್ಲಿ ನಮೂದಿಸಿದ ಕನಿಷ್ಠ ಪಕ್ಷ ಎರಡು ಸಾಕ್ಷಗಳೊಂದಿಗೆ ಕ್ಲೇಮುಗಳನ್ನು ತರಿಸಿಕೊಂಡ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು.

ಪರಂತು, ಗ್ರಾಮ ಸಭೆಯು, ಅಗತ್ಯವೆಂದು ಪರಿಗಣಿಸಿದಲ್ಲಿ ಆ ಕುರಿತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ನಂತರ ಮೂರು ತಿಂಗಳ ಅಂಥ ಅವಧಿಯನ್ನು ವಿಸ್ತರಿಸಬಹುದು.

(ಬಿ) ಅದರ ಸಮುದಾಯ ಅರಣ್ಯ ಸಂಪನ್ಮೂಲವನ್ನು ನಿರ್ಧರಿಸುವ ಪ್ರಕ್ರಿಯೆಯ ಪ್ರಾರಂಭದ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮ್ತು ಉಪವಿಭಾಗೀಯ ಮಟ್ಟದ ಸಮಿತಿಗೆ ಅದನ್ನು ತಿಳಿಸತಕ್ಕದ್ದು.

(2) ಅರಣ್ಯ ಹಕ್ಕುಗಳ ಸಮಿತಿಯು, ಈ ಮುಂದಿನ ಪ್ರಕಾರ್ಯಗಳಲ್ಲಿ ಗ್ರಾಮ ಸಭೆಗೆ ನೆರವಾಗತಕ್ಕದ್ದು ಅಂದರೆ:–

(i) ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಕ್ಲೇಮುಗಳನ್ನು ಮತ್ತು ಅಂಥ ಕ್ಲೇಮುಗಳಿಗೆ ಸಮರ್ಥನೆಯಾಗಿ ಲಗತ್ತಿಸಿದ ಸಾಕ್ಷ್ಯವನ್ನು ಸ್ವೀಕರಿಸುವುದು, ಸ್ವೀಕೃತಿ ಕೊಡುವುದು ಮತ್ತು ಇಟ್ಟುಕೊಳ್ಳುವುದು;

(ii) ನಕ್ಷೆಗಳೂ ಸೇರಿದಂತೆ ಕ್ಷೇಮುಗಳ ಮತ್ತು ಸಾಕ್ಷ್ಯದ ದಾಖಲೆಯನ್ನು ಸಿದ್ಧಪಡಿಸುವುದು;

(iii) ಅರಣ್ಯ ಹಕ್ಕುಗಳ ಕ್ಲೇಮುದರರ ಪಟ್ಟಿಯನ್ನು ಸಿದ್ಧಪಡಿಸುವುದು;

(iv) ಈ ನಿಯಮಗಳಲ್ಲಿ ಉಪಬಂಧಿಸಿದಂತೆ ಕ್ಲೇಮುಗಳನ್ನು ಪರಿಶೀಲಿಸುವುದು;

(v) ಕ್ಲೇಮಿನ ಸ್ವರೂಪ ಮತ್ತು ವ್ಯಾಪ್ತಿಯ ಬಗೆಗಿನ ತನ್ನ ನಿರ್ಣಯಗಳನ್ನು ಗ್ರಾಮ ಸಬೆಯ ಪರ್ಯಾಲೋಚನೆಗಾಗಿ ಅದರ ಮುಂದೆ ಮಂಡಿಸುವುದು.

(3) ಸ್ವೀಕರಿಸಿದ ಪ್ರತಿಯೊಂದು ಕ್ಲೇಮಿಗೆ ಅರಣ್ಯ ಹಕ್ಕುಗಳ ಸಮಿತಿಯು, ಸೂಕ್ತ ಲಿಖಿತ ಸ್ವೀಕೃತಿಯನ್ನು ನೀಡತಕ್ಕದ್ದು.

(4) ಅರಣ್ಯ ಹಕ್ಕುಗಳ ಸಮಿತಿಯು,ಈ ನಿಯಮಗಳ ಅನುಬಂಧ I ರಲ್ಲಿ ಕೊಟ್ಟಿರುವ ನಮೂನೆ 'ಬಿ'ಯಲ್ಲಿ ಸಮುದಾಯದ ಅರಣ್ಯ ಹಕ್ಕುಗಳಾಗಿ ಗ್ರಾಮ ಸಭೆಯ ಪರವಾಗಿ

ಕ್ಲೇಮುಗಳನ್ನು ಸಹ ಸಿದ್ಧಪಡಿಸತಕ್ಕದ್ದು.

(5) ಗ್ರಾಮ ಸಭೆಯು (2)ನೇ ಉಪ ನಿಯಮದ (v)ನೇ ಖಂಡದ ಮೇರೆಗೆ ನಿರ್ಣಯಗಳನ್ನು ಸ್ವೀಕರಿಸಿದ ಮೇಲೆ, ಅರಣ್ಯ ಹಕ್ಕುಗಳ ಸಮಿತಿಯ ನಿರ್ಣಯಗಳನ್ನು ಪರಿಶೀಲಿಸಲು ಮುಂಚಿತವಾಗಿಯೇ ನೋಟೀಸು ನೀಡಿದ ತರುವಾಯ ಸಭೆ ಸೇರತಕ್ಕದ್ದು, ಸೂಕ್ತ ನಿರ್ಣಯಗಳನ್ನು ಅಂಗೀಕರಿಸತಕ್ಕದ್ದು ಮತ್ತು ಅದನ್ನು ಉಪ ವಿಭಾಗೀಯ ಮಟ್ಟದ ಸಮಿತಿಗೆ ಕಳುಹಿಸಿಕೊಡತಕ್ಕದ್ದು.

(6) ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯು, ಗ್ರಾಮ ಸಭೆಗಳ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಗ್ರಾಮ ಸಭೆಯ ಕಾರ್ಯದರ್ಶಿಯಾಗಿ ಸಹ ಕಾರ್ಯನಿರ್ವಹಿಸುವರು.

**12. ಕ್ಲೇಮುಗಳನ್ನು ಪರಿಶೀಲಿಸಲು ಅರಣ್ಯ ಹಕ್ಕುಗಳ ಸಮಿತಿಯ ಕಾರ್ಯವಿಧಾನ**

(1) ಅರಣ್ಯ ಹಕ್ಕುಗಳ ಸಮಿತಿಯು, ಸಂಬಂಧಪಟ್ಟ ಕ್ಲೇಮುದಾರನಿಗೆ ಮತ್ತು ಅರಣ್ಯ ಇಲಾಖೆಗೆ ಸೂಕ್ತ ಸೂಚನೆಯನ್ನು ನೀಡಿದ ತರುವಾಯ,–

(ಎ) ನಿವೇಶನ ಸ್ಥಳಕ್ಕೆ ಭೇಟಿ ನೀಡತಕ್ಕದ್ದು ಮತ್ತು ಸ್ಥಳದ ಮೇಲಿನ ಕ್ಲೇಮಿನ ಸ್ವರೂಪ, ವ್ಯಾಪ್ತಿ ಮತ್ತು ಸಾಕ್ಷ್ಯವನ್ನು ಖುದ್ದಾಗಿ ಪರಿಶೀಲನೆ ಮಾಡತಕ್ಕದ್ದು, ಮತ್ತು

(ಬಿ) ಕ್ಲೇಮುದಾರನಿಂದ ಮತ್ತು ಸಾಕ್ಷಿದಾರರಿಂದ ಯಾವುದೇ ಹೆಚ್ಚಿನ ಸಾಕ್ಷ್ಯವನ್ನು ಅಥವಾ ದಾಖಲೆಯನ್ನು ಸ್ವೀಕರಿಸತಕ್ಕದ್ದು.

(ಸಿ) ದನಗಾಹಿಗಳ ಮತ್ತು ಅಲೆಮಾರಿ ಬುಡಕಟ್ಟುಗಳ ಹಕ್ಕುಗಳ ನಿರ್ಧರಣೆಗಾಗಿ ಸದಸ್ಯರುಗಳು ವ್ಯಕ್ತಿಗತವಾಗಿ, ಸಮುದಾಯದ ಅಥವಾ ಪಾರಂಪರಿಕ ಸಮುದಾಯದ ಸಂಸ್ಥೆಯ ಮೂಲಕ ಸಲ್ಲಿಸಿದ ಕ್ಲೇಮುಗಳನ್ನು ಅಂಥ ವ್ಯಕ್ತಿಗಳು, ಸಮುದಾಯಗಳು ಅಥವಾ ಅವರ ಪ್ರತಿನಿಧಿಗಳು ಹಾಜರಿರುವ ಕಾಲಗಳಲ್ಲಿ ಪರಿಶೀಲನೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(ಡಿ) ಪ್ರಾಚೀನ ಬುಡಕಟ್ಟು ಗುಂಪಿನ ಅಥವಾ ಕೃಷಿ ಪದ್ಧತಿ ಆಚರಣೆ ಬರುವುದಕ್ಕೆ ಮುಂಚಿನ ಸಮುದಾಯದ ಸದಸ್ಯರು ತಮ್ಮ ವಾಸಸ್ಥಳದ ಹಕ್ಕಿನ ನಿರ್ಧರಣೆಗಾಗಿ ತಮ್ಮ ಸಮುದಾಯದ ಅಥವಾ ಪಾರಂಪರಿಕ ಸಮುದಾಯ ಸಂಸ್ಥೆಯ ಮೂಲಕ ಸಲ್ಲಿಸಿದ ಕ್ಲೇಮನ್ನು ಅಂಥ ಸಮುದಾಯಗಳು ಅಥವಾ ಅವರ ಪ್ರತಿನಿಧಿಗಳು ಹಾಜರಿರುವಾಗ ಪರಿಶೀಲನೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(ಇ) ಗುರುತಿಸಬಹುದಾದ ಪ್ರಮುಖ ಭೂಗುರುತುಗಳನ್ನು ತೋರಿಸುವ, ಪ್ರತಿಯೊಂದು ಕ್ಲೇಮಿನ ಪ್ರದೇಶವನ್ನು ಚಿತ್ರಿಸಿರುವ ನಕ್ಷೆಯನ್ನು ಸಿದ್ಧಪಡಿಸತಕ್ಕದ್ದು;

(2) ಆ ತರುವಾಯ ಅರಣ್ಯ ಹಕ್ಕುಗಳ ಸಮಿತಿಯು, ಕ್ಲೇಮಿನ ಮೇಲಿನ ತನ್ನ ನಿರ್ಣಯಗಳನ್ನು ದಾಖಲಿಸತಕ್ಕದ್ದು ಮತ್ತು ಪರಿಶಿಲನೆಗಾಗಿ ಅದನ್ನು ಗ್ರಾಮ ಸಭೆಗೆ ಕಳುಹಿಸತಕ್ಕದ್ದು.

(3) ಬೇರೊಂದು ಗ್ರಾಮದ ಪಾರಂಪರಿಕ ಅಥವಾ ರೂಢಿಗತ ಸರಹದ್ದು ಭಾಗಗಳಿಗೆ ಸಂಬಂಧಿಸಿದಂತೆ ಪರಸ್ಪರ ವಿರುದ್ಧವಾದ ಕ್ಲೇಮುಗಳಿದ್ದರೆ ಅಥವಾ ಒಂದು ಗ್ರಾಮಸಭೆಗಿಂತ ಹೆಚ್ಚಿನ ಗ್ರಾಮ ಸಭೆಗಳು ಅರಣ್ಯ ಪ್ರದೇಶವನ್ನು ಬಳಸುತ್ತಿದ್ದರೆ, ಸಂಬಂಧಪಟ್ಟ ಗ್ರಾಮಸಭೆಗಳ ಅರಣ್ಯ ಹಕ್ಕುಗಳ ಸಮಿತಿಗಳು ಅಂಥ ಕ್ಲೇಮುಗಳ ಉಪಭೋಗದ ಸ್ವರೂಪವನ್ನು ಪರಿಶೀಲಿಸಲು ಜಂಟಿಯಾಗಿ ಸಭೆ ಸೇರತಕ್ಕದ್ದು ಮತ್ತು ನಿರ್ಣಯಗಳನ್ನು ಸಂಬಂಧಪಟ್ಟ ಗ್ರಾಮ ಸಭೆಗಳಿಗೆ ಲಿಖಿತದಲ್ಲಿ ಸಲ್ಲಿಸತಕ್ಕದ್ದು.

ಪರಂತು, ಗ್ರಾಮ ಸಭೆಗಳು ಪರಸ್ಪರ ವಿರುದ್ಧವಾದ ಕ್ಲೇಮುಗಳನ್ನು ಇತ್ಯರ್ಥಪಡಿಸಲು ಅಸಮರ್ಥವಾದರೆ, ನಿರ್ಣಯ ಕೈಗೊಳ್ಳುವುದಕ್ಕಾಗಿ ಅದನ್ನು ಗ್ರಾಮ ಸಭೆಯ ಉಪವಿಭಾಗೀಯ ಮಟ್ಟದ ಸಮಿತಿಗೆ ಉಲ್ಲೇಖಿಸತಕ್ಕದ್ದು.

(4) ಮಾಹಿತಿಗಾಗಿ, ದಾಖಲೆಗಳಿಗಾಗಿ ಅಥವಾ ದಸ್ತಾವೇಜುಗಳಿಗಾಗಿ ಗರಾಮ ಸಭೆಯು ಅಥವಾ ಅರಣ್ಯ ಹಕ್ಕುಗಳ ಸಮಿತಿಯು ಸಲ್ಲಿಸಿದ ಲಿಖಿತ ಕೋರಿಕೆಯ ಮೇಲೆ, ಸಂಬಂಧಪಟ್ಟ ಪ್ರಾಧಿಕಾರಗಳು, ಸಂದರ್ಭಾನುಸಾರ, ಗ್ರಾಮಸಭೆಗೆ ಅಥವಾ ಅರಣ್ಯ ಹಕ್ಕುಗಳ ಸಮಿತಿಗೆ ಅದರ ಪ್ರಮಾಣಿತ ಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅಗತ್ಯವಾದರೆ, ತನ್ನ ಸ್ಪಷ್ಟೀಕರಣವನ್ನು ಅಧಿಕರತ ಅಧಿಕಾರಿಯ ಮೂಲಕ ಒದಗಿಸತಕ್ಕದ್ದು.

**13. ಅರಣ್ಯ ಹಕ್ಕುಗಳನ್ನು ನಿರ್ಧರಿಸಲು ಸಾಕ್ಷ್ಯ –** (1) ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವುದಕ್ಕಾಗಿ ಮತ್ತು ನಿಹಿತಗೊಳಿಸುವುದಕ್ಕಾಗಿ ಇತರ ವಿಷಯಗಳ ಜೊತೆಗೆ ಸಾಕ್ಷ್ಯವು,–

(ಎ) ಗೆಜೆಟಿಯರುಗಳು, ಜನಗಣತಿ, ಮೋಜಣಿ ಮತ್ತು ಭೂ ಕಂದಾಯ ನಿರ್ಧಾರದ ವರದಿಗಳು, ನಕ್ಷೆಗಳು, ಉಪಗ್ರಹ ಚಿತ್ರಣ, ಕಾರ್ಯ ಯೋಜನೆಗಳು, ನಿರ್ವಹಣಾ ಯೋಜನೆಗಳು, ಅತಿ ಸಣ್ಣ ಯೋಜನೆಗಳು, ಅರಣ್ಯ ವಿಚಾರಣಾ ವರದಿಗಳು, ಇತರ ಅರಣ್ಯ ದಾಖಲೆಗಳು, ಯಾವುದೇ ಹೆಸರಿನಿಂದ ಕರೆಯಲಾಗುವ ಹಕ್ಕುಗಳು

ದಾಖಲೆ, ಪಟ್ಟಾಗಳು ಅಥವಾ ಗುತ್ತಿಗೆಗಳು, ಸರ್ಕಾರವು ರಚಿಸಿದ ಸಮಿತಿಗಳ, ಮತ್ತು ಆಯೋಗಗಳ ವರದಿಗಳು, ಸರ್ಕಾರಿ ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳು, ನಿರ್ಣಯಗಳು ಮುಂತಾದಂಥ ಸಾರ್ವಜನಿಕ ದಸ್ತಾವೇಜುಗಳನ್ನು ಸರ್ಕಾರಿ ದಾಖಲೆಗಳನ್ನು;

(ಬಿ) ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ಪಾಸ್‌ಪೋರ್ಟ್, ಮನೆ ತೆರಿಗೆ ರಸೀದಿಗಳು, ಅಧಿವಾಸದ ಪ್ರಮಾಣ ಪತ್ರಗಳಂಥ ಅಧಿಕೃತ ಸರ್ಕಾರಿ ದಸ್ತಾವೇಜುಗಳನ್ನು;

(ಸಿ) ಮನೆ, ಗುಡಿಸಲು ಮತ್ತು ಒಡ್ಡುಗಳು, ತಡೆ ಒಡ್ಡುಗಳು ಮತ್ತು ಅದೇ ಬಗೆಯವುಗಳು ಸೇರಿದಂತೆ, ಭೂಮಿಯನ್ನು ಸಮತಟ್ಟು ಮಾಡುವುದು ಒಳಗೊಂಡಂತೆ, ಅದನ್ನು ಖಾಯಂ ಆಗಿ ಅಭಿವೃದ್ಧಿಪಡಿಸಿದಂಥ ವಾಸ್ತವಿಕ ಸಂಗತಿಗಳನ್ನು;

(ಡಿ) ನ್ಯಾಯಾಲಯದ ಆದೇಶಗಳು ತೀರ್ಪುಗಳೂ ಸೇರಿದಂತೆ ಅರೆನ್ಯಾಯಿಕ ಮತ್ತು ನ್ಯಾಯಿಕ ದಾಖಲೆಗಳನ್ನು;

(ಇ) ಯಾವುದೇ ಅರಣ್ಯ ಹಕ್ಕುಗಳ ಉಪಭೋಗವನ್ನು ವಿವರಿಸುವಂಥ ಮತ್ತು ಭಾರತ ಮಾನವ ವಿಕಾಸ ವಿಜ್ಞಾನ ಸಮೀಕ್ಷೆಯಂಥ ಪ್ರಸಿದ್ಧ ಸಂಸ್ಥೆಗಳ ಮೂಲಕ ರೂಢಿಗತ ಕನೂನು ಬಲ ಹೊಂದಿರುವಂಥ ಸಂಶೋಧನಾ ಅಧ್ಯಯನಗಳು. ರೂಢಿಗಳು ಮತ್ತು ಸಂಪ್ರದಾಯಗಳನ್ನು ದಸ್ತಾವೇಜು ರೂಪದಲ್ಲಿ ಸಂಗ್ರಹಿಸಿಡುವುದನ್ನು;

(ಎಫ್) ಹಿಂದಿನ ರಾಜ ಸಂಸ್ಥಾನಗಳಿಂದ ಅಥವಾ ಪ್ರಾಂತ್ಯಗಳಿಂದ ಅಥವಾ ಅಂಥ ಇತರ ಮಧ್ಯವರ್ತಿಗಳಿಂದ ಪಡೆದುಕೊಂಡ ನಕ್ಷೆಗಳು, ಹಕ್ಕುಗಳ ದಾಖಲೆ, ವಿಶೇಷ ಅಧಿಕಾರಿಗಳು, ರಿಯಾಯಿತಿಗಳು, ಅನುಕೂಲಗಳು ಸೇರಿದಂತೆ ಯಾವುದೇ ದಾಖಲೆಯನ್ನು;

(ಜಿ) ಬಾವಿಗಳು, ಸ್ಮಶಾನಗಳು, ಪವಿತ್ರ ಸ್ಥಳಗಳಂಥ ಪ್ರಾಚೀನತೆಯನ್ನು ರುಜುವಾತುಪಡಿಸುವ ಪಾರಂಪರಿಕ ರಚನೆಗಳನ್ನು;

(ಹೆಚ್) ಹಿಂದಿನ ಭೂ ದಾಖಲೆಗಳಲ್ಲಿ ನಮೂದಿಸಿದ ಅಥವಾ ಪ್ರಾಚೀನ ಕಾಲದಲ್ಲಿ ಹಳ್ಳಿಯಲ್ಲಿ ಕಾನೂನು ಸಮ್ಮತವಾದ ನಿವಾಸಿಯೆಂದು ಮಾನ್ಯತೆ ಪಡೆದ ವ್ಯಕ್ತಿಗಳ ಪೂರ್ವಜರನ್ನು ಗುರುತಿಸುವ ವಂಶಾವಳಿಯನ್ನು;

(ಐ) ಕ್ಲೇಮುದಾರರನ್ನು ಹೊರತುಪಡಿಸಿ ಲಿಖಿತದಲ್ಲಿರುವ ಹಿರಿಯರ ಹೇಳಿಕೆಗಳನ್ನು ಒಳಗೊಂಡಿರತಕ್ಕದ್ದು.

(2) ಇತರ ವಿಷಯಗಳೊಂದಿಗೆ ಸಮುದಾಯ ಅರಣ್ಯ ಹಕ್ಕುಗಳ ಸಾಕ್ಷ್ಯವು,–

(ಎ) ನಿಸ್ತಾರ್‌ನಂಥ ಯಾವುದೇ ಹೆಸರಿನಿಂದ ಕರೆಯಲಾಗುವ ಸಮುದಾಯದ ಹಕ್ಕುಗಳನ್ನು;

(ಬಿ) ಪಾರಂಪರಿಕ ಗೋಮಾಳಗಳು; ಬೇರುಗಳು ಮತ್ತು ಗೆಡ್ಡೆಗಳು, ಮೇವು, ಅರಣ್ಯ ಖಾದ್ಯ ಹಣ್ಣುಗಳು ಮತ್ತು ಇತರ ಸಣ್ಣ ಅರನ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಪ್ರದೇಶಗಳು, ಮೀನುಗಾರಿಕೆ ಪ್ರದೇಶಗಳು; ನೀರಾವರಿ ಪದ್ಧತಿಗಳು; ಮಾನವ ಅಥವಾ ಪಶು ಸಂಪತ್ತಿನ ಬಳಕೆಯ ಜನ ಮೂಲಗಳು, ಗಿಡಮೂಲಿಕೆ ವೃತ್ತಿಗಾರರು ಔಷಧೀಯ ಸಸ್ಯ ಸಂಗ್ರಹಣೆ ಮಾಡುವ ಪ್ರದೇಶಗಳನ್ನು;

(ಸಿ) ಸ್ಥಳೀಯ ಸಮುದಾಯಗಳು ಕಟ್ಟಿದ ರಚನೆಗಳ ಅವಶೇಷಗಳು, ಪವಿತ್ರ ಮರಗಳು, ತೋಪುಗಳು ಮತ್ತು ಕೊಳಗಳು ಅಥವಾ ನದೀ ಪಾತ್ರದ ಪ್ರದೇಶಗಳು, ಹೂಳುವ ಅಥವಾ ಸುಡುವ ಸ್ಮಶಾನಗಳನ್ನು

– ಒಳಗೊಳ್ಳತಕ್ಕದ್ದು.

(3) ಗ್ರಾಮಸಭೆಯು, ಉಪ ವಿಭಾಗೀಯ ಮಟ್ಟದ ಸಮಿತಿಯ ಮತ್ತು ಜಿಲ್ಲಾ ಮಟ್ಟದ ಸಮಿತಿಯು ಅರಣ್ಯ ಹಕ್ಕುಗಳನ್ನು ನಿರ್ಧರಿಸುವಲ್ಲಿ ಮೇಲೆ ನಮೂದಿಸಲಾದ ಒಂದಕ್ಕಿಂತ ಹೆಚ್ಚಿನ ಸಾಕ್ಷ್ಯಗಳನ್ನು ಪರಿಗಣಿಸತಕ್ಕದ್ದು.

**14. ಉಪ–ವಿಭಾಗೀಯ ಮಟ್ಟದ ಸಮಿತಿಗೆ ಅರ್ಜಿಗಳು :** (1) ಗ್ರಾಮ ಸಬೆಯ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ನಿರ್ಣಯದ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗೆ ಉಪ ವಿಭಾಗೀಯ ಮಟ್ಟದ ಸಮಿತಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ಉಪ–ವಿಭಾಗೀಯ ಮಟ್ಟದ ಸಮಿತಿಯು ವಿಚಾರಣೆಗಾಗಿ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕಕ್ಕಿಂತ ಕನಿಷ್ಠ ಹದಿನೈದು ದಿನಗಳಿಗಿಂತ ಮುಂಚೆ ಲಿಖಿತದಲ್ಲಿ ಹಗೂ ಅರ್ಜಿದಾರನ ಗ್ರಾಮದಲ್ಲಿ ಅನುಕೂಲಕರವಾದ ಸಾರ್ವಜನಿಕ ಸ್ಥಳದಲ್ಲಿ ನೋಟೀಸನ್ನು ಅಂಟಿಸುವ ಮೂಲಕ ಅರ್ಜಿದಾರನಿಗೆ ಮತ್ತು ಸಂಬಂಧಿಸಿದ ಗ್ರಾಮಸಭೆಗೆ ತಿಳಿಸತಕ್ಕದ್ದು.

(3) ಉಪ-ವಿಭಾಗೀಯ ಮಟ್ಟದ ಸಮಿತಿಯು ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು ಅಥವಾ ಅದರ ಪುನರ್ ಪರಿಶೀಲನೆಗಾಗಿ ಸಂಬಂಧಪಟ್ಟ ಗ್ರಾಮಸಭೆಗೆ ಉಲ್ಲೇಖಿಸಬಹುದು.

(4) ಅಂಥ ಉಲ್ಲೇಖವನ್ನು ಸ್ವೀಕರಿಸಿದ ನಂತರ, ಗ್ರಾಮಸಭೆಯ ಮೂವತ್ತು ದಿನಗಳ ಒಳಗೆ ಸಭೆ ಸೇರಿ, ಅರ್ಜಿದಾರನನ್ನು ವಿಚಾರಣೆ ಮಾಡಿ, ಆ ಉಲ್ಲೇಖದ ಮೇಲೆ ನಿರ್ಣಯವನ್ನು ಅಂಗೀಕರಿಸತಕ್ಕದ್ದು ಮತ್ತು ಅದನ್ನು ಉಪ ವಿಭಾಗೀಯ ಮಟ್ಟದ ಸಮಿತಿಗೆ ಕಳುಹಿಸತಕ್ಕದ್ದು.

(5) ಉಪ ವಿಭಾಗೀಯ ಮಟ್ಟದ ಸಮಿತಿಯು, ಗ್ರಾಮ ಸಭೆಯ ನಿರ್ಣಯವನ್ನು ಪರಿಶಿಲಿಸತಕ್ಕದ್ದು ಮತ್ತು ಅರ್ಜಿಯನ್ನು ಅಂಗೀಕರಿಸಿ ಅಥವಾ ತಿರಸ್ಕರಿಸಿ ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

(6) ಇತ್ಯರ್ಥದಲ್ಲಿರುವ ಅರ್ಜಿಗಳಿಗೆ ಬಾಧಕವಾಗದಂತೆ, ಉಪ ವಿಭಾಗೀಯ ಮಟ್ಟದ ಸಮಿತಿಯು ಇತರೆ ಕ್ಲೇಮುದಾರನ ಅರಣ್ಯ ಹಕ್ಕುಗಳ ದಾಖಲೆಗಳನ್ನು ಪರಿಶೀಲಿಸತಕ್ಕದ್ದು ಹಾಗೂ ತಾಳೆ ನೋಡತಕ್ಕದ್ದು ಹಾಗೂ ಮತ್ತು ಅವುಗಳನ್ನು ಸಂಬಂಧಪಟ್ಟ ವಿಭಾಗೀಯ ಅಧಿಕಾರಿಯ ಮೂಲಕ ಜಿಲ್ಲಾ ಮಟ್ಟದ ಸಮಿತಿಗೆ ಸಲ್ಲಿಸತಕ್ಕದ್ದು.

(7) ಎರಡು ಅಥವಾ ಹೆಚ್ಚಿನ ಗ್ರಾಮಸಭೆಗಳ ನಡುವೆ ವಿವಾದ ಉಂಟಾದ ಸಂದರ್ಭದಲ್ಲಿ ಮತ್ತು ಯಾವುದೇ ಗ್ರಾಮಸಭೆಯ ಅರ್ಜಿಯ ಮೇಲೆ ಅಥವಾ ವಿಭಾಗೀಯ ಮಟ್ಟದ ಸಮಿತಿಯು ತಾನಾಗಿಯೇ ವಿವಾದವನ್ನು ಬಗೆಹರಿಸುವ ದೃಷ್ಟಿಯಿಂದ ಸಂಬಂಧಪಟ್ಟ ಗ್ರಾಮಸಭೆಗಳ ಜಂಟಿ ಸಭೆಗಳನ್ನು ಕರೆಯತಕ್ಕದ್ದು ಮತ್ತು ಮೂವತ್ತು ದಿನಗಳೊಳಗೆ ಯಾವುದೇ ಸೌಹಾರ್ದಯುತ ಒಪ್ಪಂದ ಸಾಧ್ಯವಾಗದಿದ್ದಲ್ಲಿ, ಉಪ ವಿಭಾಗೀಯ ಮಟ್ಟದ ಸಮಿತಿಯು ಸಂಬಂಧಪಟ್ಟ ಗ್ರಾಮಸಭೆಗಳ ಅಹವಾಲನ್ನು ಆಲಿಸಿದ ನಂತರ ವಿವಾದವನ್ನು ಇತ್ಯರ್ಥಪಡಿಸತಕ್ಕದ್ದು ಮತ್ತು ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

**15. ಜಿಲ್ಲಾ ಮಟ್ಟದ ಸಮಿತಿಗೆ ಅರ್ಜಿಗಳು :** (1) ಉಪ-ವಿಭಾಗೀಯ ಮಟ್ಟದ ಸಮಿತಿಯ ತಿರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಉಪ ವಿಭಾಗೀಯ ಮಟ್ಟದ ಸಮಿತಿಯ ನಿರ್ಣಯದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ಜಿಲ್ಲಾ ಮಟ್ಟದ ಸಮಿತಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ಜಿಲ್ಲಾ ಮಟ್ಟದ ಸಮಿತಿಯು, ವಿಚಾರಣೆಗಾಗಿ ದಿನಾಂಕವನ್ನು ನಿಗದಿಗೊಳಿಸತಕ್ಕದ್ದು ಮತ್ತು ವಿಚಾರಣೆಗಾಗಿ ನಿಗದಿಗೊಳಿಸಿದ ದಿನಾಂಕಕ್ಕಿಂತ ಕನಿಷ್ಠ ಹದಿನೈದು ದಿನಗಳ ಮುಂಚೆ ಅರ್ಜಿದಾರನಿಗೆ ಮತ್ತು ಸಂಬಂಧಪಟ್ಟ ಉಪ ವಿಭಾಗೀಯ ಸಮಿತಿಗೆ ಲಿಖಿತದಲ್ಲಿ ಹಾಗೂ ಗ್ರಾಮದಲ್ಲಿ ಅನುಕೂಲಕರವಾದ ಸಾರ್ವಜನಿಕ ಸ್ಥಳದಲ್ಲಿ ನೋಟೀಸನ್ನು ಅಂಟಿಸುವ ಮೂಲಕ ತಿಳಿಸತಕ್ಕದ್ದು.

(3) ಜಿಲ್ಲಾ ಮಟ್ಟದ ಸಮಿತಿಯು ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು ಅಥವಾ ಸಂಬಂಧಪಟ್ಟ ಉಪ ವಿಭಾಗೀಯ ಮಟ್ಟದ ಸಮಿತಿಗೆ ಅದರ ಪುನರ್ ಪರಿಶೀಲನೆಗಾಗಿ ಉಲ್ಲೇಖಿಸಬಹುದು.

(4) ಅಂತಹ ಉಲ್ಲೇಖವನ್ನು ಸ್ವೀಕರಿದ ನಂತರ, ಉಪ ವಿಭಾಗೀಯ ಮಟ್ಟದ ಸಮಿತಿಯು, ಅರ್ಜಿದಾರನ ಮತ್ತು ಗ್ರಾಮಸಭೆಯ ಅಹವಾಲನ್ನು ಆಲಿಸತಕ್ಕದ್ದು ಮತ್ತು ಆ ಉಲ್ಲೇಖದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅದನ್ನು ಜಿಲ್ಲಾ ಮಟ್ಟದ ಸಮಿತಿಗೆ ತಿಳಿಸತಕ್ಕದ್ದು.

(5) ಜಿಲ್ಲಾ ಮಟ್ಟದ ಸಮಿತಿಯು ನಂತರ ಅರ್ಜಿಯನ್ನು ಪರಿಶೀಲಿಸತಕ್ಕದ್ದು ಮತ್ತು ಅರ್ಜಿಯನ್ನು ಅಂಗೀಕರಿಸಿ ಅಥವಾ ತಿರಸ್ಕರಿಸಿ ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

(6) ಜಿಲ್ಲಾ ಮಟ್ಟದ ಸಮಿತಿಯು, ಸರ್ಕಾರದ ದಖಲೆಗಳಲ್ಲಿ ಅವಶ್ಯಕ ತಿದ್ದುಪಡಿಗಳಿಗಾಗಿ ಜಿಲ್ಲಾ ಕಲೆಕ್ಟರ್ ಅಥವಾ ಜಿಲ್ಲಾಧಿಕಾರಿಗಳಿಗೆ ಕ್ಲೇಮುದಾರನ ಅಥವಾ ಕ್ಲೇಮುದಾರರ ಅರಣ್ಯ ಹಕ್ಕುಗಳ ದಾಖಲೆಯನ್ನು ಕಳುಹಿಸತಕ್ಕದ್ದು.

(7) ಎರಡು ಅಥವಾ ಹೆಚ್ಚು ಉಪ ವಿಭಾಗೀಯ ಮಟ್ಟದ ಸಮಿತಿಗಳ ಆದೇಶಗಳ ನಡುವೆ ವ್ಯತ್ಯಾಸವಿರುವ ಸಂದರ್ಭದಲ್ಲಿ, ಜಿಲ್ಲಾ ಮಟ್ಟದ ಸಮಿತಿಯು ತಾನಾಗಿಯೇ ವ್ಯತ್ಯಾಸಗಳನ್ನು ಸರಿಪಡಿಸುವ ದೃಷ್ಟಿಯಿಂದ ಸಂಬಂಧ ಪಟ್ಟ ಉಪ ವಿಭಾಗೀಯ ಮಟ್ಟದ ಸಮಿತಿಗಳ ಜಂಟಿ ಸಭೆಯನ್ನು ಕರೆಯತಕ್ಕದ್ದು. ಮತ್ತು ಯಾವುದೇ ಸೌಹಾರ್ದಯುತ ಒಪ್ಪಂದವು ಸಾಧ್ಯವಾಗದಿದ್ದಲ್ಲಿ, ಜಿಲ್ಲಾ ಮಟ್ಟದ ಸಮಿತಿಯು ಸಂಬಂಧಪಟ್ಟ ಉಪ ವಿಭಾಗೀಯ ಮಟ್ಟದ ಸಮಿತಿಗಳ ಅಹವಾಲನ್ನು ಆಲಿಸಿದ ನಂತರ, ವಿವಾದದ ಬಗ್ಗೆ ನ್ಯಾಯ ನಿರ್ಣಯ ಮಾಡತಕ್ಕದ್ದು ಮತ್ತು ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

# ಅನುಬಂಧ –I

## ಭಾರತ ಸರ್ಕಾರ
## ಬುಡಕಟ್ಟು, ವ್ಯವಹಾರಗಳ ಮಂತ್ರಾಲಯ
## ನಮೂನೆ–ಎ

## ಅರಣ್ಯ ಭೂಮಿಯ ಹಕ್ಕುಗಳ ಕ್ಲೇಮಿನ ನಮೂನೆ

(ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ನಿಯಮಗಳು 2008ರ 11(1) (ಎ) ನಿಯಮವನ್ನು ನೋಡಿ)

1. ಕ್ಲೇಮುದಾರನ (ರ) ಹೆಸರು :
2. ಗಂಡ/ಹೆಂಡತಿಯ ಹೆಸರು :
3. ತಂದೆ/ತಾಯಿಯ ಹೆಸರು :
4. ವಿಳಾಸ :
5. ಗ್ರಾಮ :
6. ಗ್ರಾಮ ಪಂಚಾಯತಿ :
7. ತಹಸೀಲ್/ತಾಲ್ಲೂಕು :
8. ಜಿಲ್ಲೆ :
9. (ಎ) ಅನುಸೂಚಿತ ಬುಡಕಟ್ಟು : ಹೌದು/ಇಲ್ಲ
   (ಪ್ರಮಾಣ ಪತ್ರದ ಅಧಿಪ್ರಮಾಣಿತ ಪ್ರತಿಯನ್ನು ಲಗತ್ತಿಸಿ)

   (ಬಿ) ಇತರ ಪಾರಂಪರಿಕ ಅರಣ್ಯವಾಸಿ : ಹೌದು/ಇಲ್ಲ
   (ಪ್ರಮಾಣ ಪತ್ರದ ಅಧಿಪ್ರಮಾಣಿತ ಪ್ರತಿಯನ್ನು ಲಗತ್ತಿಸಿ)
10. ಕುಟುಂಬದಲ್ಲಿನ ಇತರ ಸದಸ್ಯರ ಹೆಸರು ಮತ್ತು ವಯಸ್ಸು :
    (ಅವಲಂಬಿತ ಮಕ್ಕಳು ಮತ್ತು ವಯಸ್ಕರೂ ಸೇರಿದಂತೆ)

## ಭೂಮಿಯ ಮೇಲಿನ ಕ್ಲೇಮಿನ ಸ್ವರೂಪ:

1. ಸ್ವಾಧೀನತೆಯಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣ
   ಎ) ವಾಸಕ್ಕಾಗಿ
   ಬಿ) ಸ್ವಂತ–ಸಾಗುವಳಿಗಾಗಿ, ಯಾವುದಾದರೂ ಇದ್ದರೆ :
2. ವಿವಾದಿತ ಭೂಮಿಗಳು ಯಾವುದಾದರೂ ಇದ್ದರೆ:
   (ಅಧಿನಿಯಮದ 3(1) (ಎಫ್) ಪ್ರಕರಣವನ್ನು ನೋಡಿ)
3. ಪಟ್ಟಾಗಳು/ಗೇಣಿಗಳು/ಮಂಜುರಾತಿಗಳು, ಯಾವುದಾದರೂ ಇದ್ದರೆ:
   (ಅಧಿನಿಯಮದ 3(1) (ಜಿ) ಪ್ರಕರಣವನ್ನು ನೋಡಿ)
4. ಸ್ಥಳದಲ್ಲಿಯೇ ಪುನರ್ವಸತಿಗಾಗಿ ಭೂಮಿ ಅಥವಾ
   ಪರ್ಯಾಯ ಭೂಮಿ ಯಾವುದಾದರೂ ಇದ್ದರೆ:
   (ಅಧಿನಿಯಮದ 3(1) (ಎಂ) ಪ್ರಕರಣವನ್ನು ನೋಡಿ)
5. ಭೂ ನಷ್ಟ ಪರಿಹಾರ ನೀಡದೆ ಯಾವ ಭೂಮಿಯಿಂದ ಸ್ಥಳಾಂತರ
   ಮಾಡಲಾಗಿತ್ತೋ ಆ ಭೂಮಿ(ಅಧಿನಿಯಮದ 4(8)ನೇ ಪ್ರಕರಣವನ್ನು ನೋಡಿ)
6. ಅರಣ್ಯ ಗ್ರಾಮಗಳಲ್ಲಿನ ಭೂಮಿಯ ವಿಸ್ತೀರ್ಣ, ಯಾವುದಾದರೂ ಇದ್ದರೆ:
   (ಅಧಿನಿಯಮದ 3(1) (ಹೆಚ್) ಪ್ರಕರಣವನ್ನು ನೋಡಿ)
7. ಯಾವುದೇ ಇತರ ಪಾರಂಪರಿಕ ಹಕ್ಕು, ಯಾವುದಾದರೂ ಇದ್ದರೆ:
   (ಅಧಿನಿಯಮದ 3(1) (ಐ) ಪ್ರಕರಣವನ್ನು ನೋಡಿ)
8. ಸಮರ್ಥಿಸುವ ಸಾಕ್ಷ್ಯ :
   (ನಿಯಮ 13 ನೋಡಿ)
9. ಯಾವುದೇ ಇತರ ಮಾಹಿತಿ :

**ಕ್ಲೇಮುದಾರನ(ರ) ಸಹಿ/ ಹೆಬ್ಬೆರಳು ಗುರುತು**

## ಭಾರತ ಸರ್ಕಾರ
## ಬುಡಕಟ್ಟು, ವ್ಯವಹಾರಗಳ ಮಂತ್ರಾಲಯ
## ನಮೂನೆ-ಬಿ
## ಸಮುದಾಯ ಹಕ್ಕುಗಳ ಕ್ಲೇಮಿನ ನಮೂನೆ

(ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ನಿಯಮಗಳು 2008ರ 11(1) (ಎ) ಮತ್ತು 11(4) ನಿಯಮವನ್ನು ನೋಡಿ)

1. ಕ್ಲೇಮುದಾರನ(ರ) ಹೆಸರು :

   ಎ) ಅರಣ್ಯವಾಸಿ ಅನುಸೂಚಿತ ಬುಡಕಟ್ಟು ಸಮುದಾಯ : ಹೌದು/ಇಲ್ಲ

   ಬಿ) ಇತರ ಪಾರಂಪರಿಕ ಅರಣ್ಯವಾಸಿ ಸಮುದಾಯ : ಹೌದು/ಇಲ್ಲ
2. ಗ್ರಾಮ :
3. ಗ್ರಾಮ ಪಂಚಾಯತಿ :
4. ತಹಸೀಲ್/ತಾಲ್ಲೂಕು :
5. ಜಿಲ್ಲೆ :

**ಅನುಭವಿಸಿದ ಸಮುದಾಯದ ಹಕ್ಕುಗಳ ಸ್ವರೂಪ:**

1. ನಿಸ್ತಾರ್‌ನಂಥ ಸಮುದಾಯ ಹಕ್ಕುಗಳು, ಯಾವುದಾದರೂ ಇದ್ದರೆ :

   (ಅಧಿನಿಯಮದ 3(1) (ಬಿ) ಪ್ರಕರಣವನ್ನು ನೋಡಿ)
2. ಸಣ್ಣ ಅರಣ್ಯ ಉತ್ಪನ್ನದ ಮೇಲಿನ ಹಕ್ಕುಗಳು, ಯಾವುದಾದರು ಇದ್ದರೆ:

   (ಅಧಿನಿಯಮದ 3(1) (ಸಿ) ಪ್ರಕರಣವನ್ನು ನೋಡಿ)
3. ಸಮುದಾಯ ಹಕ್ಕುಗಳು

   ಎ. ಬಳಕೆಗಳು ಅಥವಾ ಹಕ್ಕುಗಳು(ಮೀನು, ಜಲನಿಕಾಯಗಳು) ಯಾವುದಾದರೂ ಇದ್ದರೆ:

   ಬಿ. ಮೇಯಿಸುವ ಹಕ್ಕು, ಯಾವುದಾದರೂ ಇದ್ದರೆ;

   ಸಿ. ಅಲೆಮಾರಿಗಳಿಗೆ ಮತ್ತು ದನಗಾಹಿಗಳಿಗೆ ಪಾರಂಪರಿಕ ಸಂಪನ್ಮೂಲ ಪಡೆಯುವ ಹಕ್ಕು ಯಾವುದಾದರೂ ಇದ್ದರೆ:

(ಅಧಿನಿಯಮದ 3(1) (ಕೆ) ಪ್ರಕರಣವನ್ನು ನೋಡಿ)

4. ಪ್ರಾಚೀನ ಬುಡಕಟ್ಟು ಗುಂಪುಗಳಿಗೆ ಮತ್ತು ಕೃಷಿ ಪದ್ಧತಿ ಬರುವ ಮುಂಚೆಯೇ ಇದ್ದ ಸಮುದಾಯಗಳಿಗೆ ವಾಸ ಸ್ಥಳದ ಮತ್ತು ನಿವಾಸದ ಸಮುದಾಯ ಹಿಡುವಳಿಗಳು. ಯಾವುದಾದರೂ ಇದ್ದರೆ:

   (ಅಧಿನಿಯಮದ 3(1) (ಇ) ಪ್ರಕರಣವನ್ನು ನೋಡಿ)

5. ಜೈವಿಕ ವೈವಿಧ್ಯತೆ, ಬೌದ್ಧಿಕ ಸ್ವತ್ತು ಮತ್ತು ಪಾರಂಪರಿಕ ಜ್ಞಾನ ಪಡೆಯುವ ಹಕ್ಕು ಯಾವುದಾದರೂ ಇದ್ದರೆ:

   (ಅಧಿನಿಯಮದ 3(1) (ಕೆ) ಪ್ರಕರಣವನ್ನು ನೋಡಿ)

6. ಇತರ ಪಾರಂಪರಿಕ ಹಕ್ಕು, ಯಾವುದಾದರೂ ಇದ್ದರೆ:

   (ಅಧಿನಿಯಮದ 3(1) (ಎಲ್) ಪ್ರಕರಣವನ್ನು ನೋಡಿ)

7. ಸಮರ್ಥಿಸುವ ಸಾಕ್ಷ್ಯ :

   (13ನೇ ನಿಯಮ ನೋಡಿ)

8. ಯಾವುದಾದರೂ ಇತರ ಮಾಹಿತಿ :

**ಕ್ಲೇಮುದಾರನ(ರ) ಸಹಿ/ ಹೆಬ್ಬೆರಳ ಗುರುತು:**

# ಅಧ್ಯಾಯ – II
## ಗ
## ಬುಡಕಟ್ಟು, ವ್ಯವಹಾರಗಳ ಮಂತ್ರಾಲಯ
## ಸ್ವಾಧಿನತೆಯಲ್ಲಿರುವ ಅರಣ್ಯ ಭೂಮಿಗಾಗಿ ಹಕ್ಕುಪತ್ರ

(ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ನಿಯಮಗಳು 2008ರ 8(ಹೆಚ್)ನಿಯಮವನ್ನು ನೋಡಿ)

1. ಅರಣ್ಯ ಹಕ್ಕುಗಳ ಧಾರಕನ(ರ) ಹೆಸರು(ಗಳು) (ಗಂಡ/ಹೆಂಡತಿ ಸೇರಿದಂತೆ) :
2. ತಂದೆ/ತಾಯಿಯ ಹೆಸರು :
3. ಅವಲಂಬಿತರ ಹೆಸರು :
4. ವಿಳಾಸ :
5. ಗ್ರಾಮ / ಗ್ರಾಮ ಸಭೆ :
6. ಗ್ರಾಮ ಪಂಚಾಯತಿ :
7. ತಹಸೀಲ್/ತಾಲ್ಲೂಕು :
8. ಜಿಲ್ಲೆ :
9. ಅನುಸೂಚಿತ ಬುಡಕಟ್ಟು/ಇತರ ಪಾರಂಪರಿಕ ಅರಣ್ಯವಾಸಿಯೇ :
10. ಪ್ರದೇಶ :
11. ಖಾಸ್ರ/ಭಾಗ ಸಂಖ್ಯೆ ಸೇರಿದಂತೆ ಪ್ರಮುಖ ಭೂ ಗುರುತುಗಳಿಂದ ಸರಹದ್ದುಗಳ ವರ್ಣನೆ:

    ಅಧಿನಿಯಮದ 4ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಈ ಹಕ್ಕು ಅನುವಂಶೀಯವಾದುದು, ಆದರೆ, ಪರಭಾರೆ ಮಾಡುವಂಥದ್ದಲ್ಲ ಅಥವಾ ವರ್ಗಾವಣೆ ಮಾಡುವಂಥದ್ದಲ್ಲ.

    ...................(ರಾಜ್ಯದ ಹೆಸರು) ಸರ್ಕಾರದ ಪರವಾಗಿ ಈ ಮೂಲಕ, ಈ ಕೆಳಗೆ ಸಹಿ ಮಾಡಿರುವ ನಾವು ಮೇಲ್ಕಂಡ ಅರಣ್ಯ ಹಕ್ಕುಗಳನ್ನು ದೃಢೀಕರಿಸಲು ಸಹಿ ಮಾಡಿರುತ್ತೇವೆ.

ವಿಭಾಗೀಯ ಅರಣ್ಯ ಅಧಿಕಾರಿ/ಅರಣ್ಯಗಳ ಉಪ ಸಂರಕ್ಷಣಾಧಿಕಾರಿ

ಜಿಲ್ಲಾ ಬುಡಕಟ್ಟು ಕಲ್ಯಾಣ ಅಧಿಕಾರಿ

ಜಿಲ್ಲಾ ಕಲೆಕ್ಟರ್/ ಜಿಲ್ಲಾಧಿಕಾರಿ

# ಅಧ್ಯಾಯ –III

## ಭಾರತ ಸರ್ಕಾರ

## ಬುಡಕಟ್ಟು, ವ್ಯವಹಾರಗಳ ಮಂತ್ರಾಲಯ

## ಸಮುದಾಯ ಅರಣ್ಯ ಹಕ್ಕುಗಳಿಗೆ ಹಕ್ಕುಪತ್ರ

(ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ನಿಯಮಗಳು 2008ರ 8(ಹೆಚ್)ನಿಯಮವನ್ನು ನೋಡಿ)

1. ಸಮುದಾಯ ಅರಣ್ಯ ಹಕ್ಕುಧಾರಕನ (ರ) ಹೆಸರು (ಗಳು) :
2. ಗ್ರಾಮ/ಗ್ರಾಮ ಸಭೆ :
3. ಗ್ರಾಮ ಪಂಚಾಯತಿ :
4. ತಹಸೀಲ್/ತಾಲ್ಲೂಕು :
5. ಜಿಲ್ಲೆ :
6. ಅನುಸೂಚಿತ ಬುಡಕಟ್ಟು/ಇತರ ಪಾರಂಪರಿಕ ಅರಣ್ಯವಾಸಿಯೇ:
7. ಸಮುದಾಯ ಹಕ್ಕುಗಳ ಸ್ವರೂಪ :
8. ಷರತ್ತುಗಳು ಯಾವುದಾದರೂ ಇದ್ದರೆ :

   ರೂಢಿಗತ ಸರಹದ್ದು ಮತ್ತು/ ಅಥವಾ

   ಖಾಸ್ರ/ಭಾಗ ಸಂಖ್ಯೆ ಸೇರಿದಂತೆ ಪ್ರಮುಖ ಭೂ ಗುರುತುಗಳಿಂದ ಸರಹದ್ದುಗಳ ವರ್ಣನೆ : ಸಮುದಾಯ ಅರಣ್ಯ ಹಕ್ಕುಧಾರಕನ(ರ) ಹೆಸರು(ಗಳು) :

   1.

   2.

   3. ....................................

ಈ ಕೆಳಗೆ ಸಹಿ ಮಾಡಿರುವ ನಾವು .....................................(ರಾಜ್ಯದ ಹೆಸರು) ಸರ್ಕಾರದ ಪರವಾಗಿ ಈ ಮೂಲಕ, ಮೇಲೆ ಸೂಚಿಸಿದ ಸಮುದಾಯ ಅರಣ್ಯ ಹಕ್ಕುಗಳ ಧಾರಕರಿಗೆ ಹಕ್ಕು ಪತ್ರದಲ್ಲಿ ಸೂಚಿಸಿದಂತೆ ಅರಣ್ಯ ಹಕ್ಕನ್ನು ದೃಢೀಕರಿಸಲು ಸಹಿ ಮಾಡಿರುತ್ತೇವೆ.

ವಿಭಾಗೀಯ ಅರಣ್ಯ ಅಧಿಕಾರಿ/ಅರಣ್ಯಗಳ ಉಪ ಸಂರಕ್ಷಣಾಧಿಕಾರಿ

ಜಿಲ್ಲಾ ಬುಡಕಟ್ಟು ಕಲ್ಯಾಣ ಅಧಿಕಾರಿ

ಜಿಲ್ಲಾ ಕಲೆಕ್ಟರ್/ ಜಿಲ್ಲಾಧಿಕಾರಿ

ಭಾರತ ರಾಜಪತ್ರ ವಿಶೇಷ ಸಂಚಿಕೆ, ಭಾಗ–IIರ, ವಿಭಾಗ–3,

ಉಪವಿಭಾಗ(1)ರಲ್ಲಿ ಪ್ರಕಟಿಸಲಾಗುವುದು)

# ಭಾರತ ಸರ್ಕಾರ
# ಬುಡಕಟ್ಟು ವ್ಯವಹಾರಗಳ ಮಂತ್ರಾಲಯ

**ನವದೆಹಲಿ, 6 ಸೆಪ್ಟೆಂಬರ್ 2012**

## ಅಧಿಸೂಚನೆ

ಜಿ.ಎಸ್.ಆರ್.ಸಂ. **669**(ಇ) – ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ತಿದ್ದುಪಡಿ ನಿಯಮಗಳು, 2012ರ ಕರಡು ಪ್ರತಿಯ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ 2006ರ (2007ರ) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 578(ಇ), ದಿನಾಂಕ 19ನೇ ಜುಲೈ 2012ರ ಅಧಿಸೂಚನೆ ಮೇರೆಗೆ ಭಾರತ ರಾಜಪತ್ರದ ಭಾಗ–II, ವಿಭಾಗ–3 ಉಪವಿಭಾಗ(i)ರಲ್ಲಿ ಸದರಿ ಅಧಿಸೂಚನೆಯನ್ನೊಳಗೊಂಡಿರುವ ರಾಜಪತ್ರವು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದ ಇದೇ ದಿನಾಂಕದಿಂದ ಮೂವತ್ತು ದಿನಗಳ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ, ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ,

ಮತ್ತು ಸದರಿ ರಾಜಪತ್ರ ಪ್ರತಿಗಳು ದಿನಾಂಕ 20ನೇ ಜುಲೈ, 2012ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ:

ಮತ್ತು ಸದರಿ ಕರಡು ತಿದ್ದುಪಡಿ ನಿಯಮಗಳ ಸಂಬಂಧದಲ್ಲಿ ಸಾರ್ವಜನಿಕರಿಂದ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೇಂದ್ರ ಸರ್ಕಾರವು ಯುಕ್ತವಾಗಿ ಪರಿಗಣಿಸಿರುವುದರಿಂದ:

ಈಗ, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006(2007ರ2)ರ 14ನೇ ಪ್ರಕರಣದ (1) ಮತ್ತು (2) ನೇ ಉಪ–ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು, ಈ ಮೂಲಕ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕುಗಳ ಮಾನ್ಯತೆ) ನಿಯಮಗಳು, 2008ನ್ನು ತಿದ್ದುಪಡಿ ಮಾಡುವ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

1. (1) ಈ ನಿಯಮಗಳನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ತಿದ್ದುಪಡಿ ನಿಯಮಗಳು, 2012 ಎಂದು ಕರೆಯತಕ್ಕದ್ದು.

   (2) ಇವು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕುಗಳ ಮಾನ್ಯತೆ) ನಿಯಮಗಳು, 2008 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) ರ 2ನೇ ನಿಯಮದ, ಉಪ–ನಿಯಮ(1)ರಲ್ಲಿ,

   (i) (ಬಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

   (ಬಿ) "ವಾಸ್ತವಿಕ ಜೀವನೋಪಾಯ ಅಗತ್ಯತೆಗಳು" ಎಂದರೆ, ಅಧಿನಿಯಮದ 3ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಹಕ್ಕುಗಳನ್ನು ಚಲಾಯಿಸುವ ಮೂಲಕ ತನ್ನ ಹಾಗೂ ಕುಟುಂಬದ ಜೀವನೋಪಾಯ ಅಗತ್ಯತೆಗಳ ಪೂರೈಕೆ ಮತ್ತು ಇದು ಅಂಥ ಹಕ್ಕುಗಳ ಚಲಾವಣೆಯಿಂದ ಬರುವ ಹೆಚ್ಚುವರಿ ಉತ್ಪನ್ನದ ಮಾರಾಟವನ್ನು ಒಳಗೊಳ್ಳುತ್ತದೆ.

(ii) (ಸಿ) ಖಂಡದ ತರುವಾಯ, ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು,ಎಂದರೆ–

(ಸಿಎ) "ಸಮುದಾಯ ಹಕ್ಕುಗಳು" ಎಂದರೆ, 3ನೇ ಪ್ರಕರಣದ(1)ನೇ ಉಪ–ಪ್ರಕರಣದ(ಬಿ), (ಸಿ), (ಡಿ), (ಇ), (ಹೆಚ್), (ಐ), (ಜೆ), (ಕೆ) ಮತ್ತು (ಎಲ್)ಖಂಡಗಳಲ್ಲಿ ಪಟ್ಟಿ ಮಾಡಲಾದ ಹಕ್ಕುಗಳು.

(iii) (ಡಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು ಎಂದರೆ:–

(ಡಿ) 3ನೇ ಪ್ರಕರಣದ (1)ನೇ ಉಪ–ಪ್ರಕರಣ (ಸಿ) ಖಂಡದ ಮೇರೆಗೆ "ಸಣ್ಣ ಅರಣ್ಯ ಉತ್ಪನ್ನದ ವಿಲೆ" ಯು ಜೀವನೋಪಾಯಕ್ಕಾಗಿ ಒಟ್ಟಾಗಿ ಅಥವಾ ತಮ್ಮ ಸಹಕಾರಗಳು ಅಥವಾ ಸಂಘಗಳು ಅಥಾ ಒಕ್ಕೂಟಗಳ ಮೂಲಕ ಅಂಥ ಉತ್ಪನ್ನದ ಬಳಕೆ ಅಥವಾ ಮಾರಾಟಕ್ಕಾಗಿ ಯುಕ್ತ ಸಾಗಾಣಿಕೆ ಮೂಲಕ ಅರಣ್ಯ ಪ್ರದೇಶದ ಒಳಗೆ ಮತ್ತು ಹೊರಗಡೆ ಮಾರಾಟಕ್ಕೆ ಹಾಗೂ ವೈಯಕ್ತಿಕ ಅಥವಾ ಒಟ್ಟಾಗಿ ಕಲೆ ಹಾಕುವಿಕೆ ಶೇಖರಣೆ, ಮೌಲ್ಯ ಸೇರಿಸುವಿಕೆ, ಸಾಗಾಣಿಕೆಯ ಹಕ್ಕನ್ನು ಒಳಗೊಂಡಿರತಕ್ಕದ್ದು.

**ವಿವರಣೆ:** (1) ಸಣ್ಣ ಅರಣ್ಯ ಉತ್ಪನ್ನದ ಸಾಗಾಣಿಕೆಗೆ ಸಂಬಂಧಿಸಿದ ಸಾಗಾಣೆ ಪರ್ಮಿಟ್ಟು ವಿಧಾನವನ್ನು 4ನೇ ನಿಯಮದ (1)ನೇ ಉಪ–ನಿಯಮದ (ಇ) ಖಂಡದ ಮೇರೆಗೆ ರಚಿಸಲಾದ ಸಮಿತಿ ಅಥವಾ ಗ್ರಾಮ ಸಭೆಯು ಅಧಿಕೃತಗೊಳಿಸಿದ ವ್ಯಕ್ತಿಯು ಮಾರ್ಪಾಡು ಮಾಡತಕ್ಕದ್ದು ಮತ್ತು ನೀಡತಕ್ಕದ್ದು.

(2) ಸಾಗಣೆ ಪರ್ಮಿಟ್ಟಿನ ಈ ಪ್ರಕ್ರಿಯಾ ಅಗತ್ಯತೆಯು ಯಾವುದೇ ರೀತಿಯಲ್ಲೂ ಸಣ್ಣ ಅರಣ್ಯ ಉತ್ಪತ್ತಿಯನ್ನು ವಿಲೆ ಮಾಡುವ ಹಕ್ಕನ್ನು ನಿರ್ಬಂಧಿಸತಕ್ಕದ್ದಲ್ಲ ಅಥವಾ ಮೊಟಕುಗೊಳಿಸತಕ್ಕದ್ದಲ್ಲ.

(3) ಸಣ್ಣ ಅರಣ್ಯ ಉತ್ಪನ್ನದ ಸಂಗ್ರಹಣೆಯು ಎಲ್ಲ ರಾಯಲ್ಟಿಗಳು ಅಥವಾ ಶುಲ್ಕಗಳು ಅಥವಾ ಯಾವುದೇ ಇತರ ಕರಗಳಿಂದ ಮುಕ್ತವಾಗಿರತಕ್ಕದ್ದು.

3. ಸದರಿ ನಿಯಮಗಳಲ್ಲಿ, 2ನೇ ನಿಯಮದ ತರುವಾಯ, ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

**"2ಎ. ಕುಗ್ರಾಮಗಳ ಗುರುತಿಸುವಿಕೆ ಅಥವಾ ಅವುಗಳ ಕ್ರೋಢೀಕರಣದ ಕಂದಾಯ ವ್ಯವಸ್ಥೆ ಮತ್ತು ಪ್ರಕ್ರಿಯೆ:–**

ರಾಜ್ಯ ಸರ್ಕಾರವು, ಈ ಮುಂದಿನವುಗಳನ್ನು ಪಾಲಿಸತಕ್ಕದ್ದು ಅಂದರೆ:–

(ಎ) ಪ್ರತಿಯೊಂದು ಪಂಚಾಯಿತಿಯು, ತನ್ನ ಗಡಿಗಳ ವ್ಯಾಪ್ತಿಯಲ್ಲಿ ಸಾಮಾನ್ಯವಾಗಿ ಯಾವುದೇ ಕಂದಾಯ ಭಾಗವಾಗಿಲ್ಲದ ಅಥವಾ ವಸತಿ ಸ್ಥಳಗಳ ಗುಂಪುಗಳು ಅಥವಾ ಅರಣ್ಯಗ್ರಾಮಗಳ ಅಥವಾ ತಾಂಡಾ ಗ್ರಾಮಗಳ ಸಮೂಹದ ಪಟ್ಟಿಯನ್ನು ಸಿದ್ದಪಡಿಸತಕ್ಕದ್ದು ಮತ್ತು ಪಂಚಾಯಿತಿಯಲ್ಲಿ ಗೊತ್ತುವಳಿಯ ಮುಖಾಂತರ ಅಧಿನಿಯಮದ ಉದ್ದೇಶಕ್ಕಾಗಿ ಗ್ರಾಮಗಳೆಂದು ಸೇರ್ಪಡೆ ಮಾಡಿದ ಪ್ರತಿಯೊಂದು ಅಂಥ ವಸತಿ ಸ್ಥಳ, ಕುಗ್ರಾಮಗಳು ಅಥವಾ ವಸತಿ ಸ್ಥಳಗಳನ್ನು, ಗ್ರಾಮ ಸಭೆಯನ್ನು ಸಮಾವೇಶಗೊಳಿಸುವ ಮೂಲಕ ಈ ಪಟ್ಟಿಯನ್ನು ಅನುಮೋದಿಸಿರಬೇಕು ಮತ್ತು ಅಂಥ ಪಟ್ಟಿಯನ್ನು ಉಪವಿಭಾಗ ಮಟ್ಟದ ಸಮಿತಿಗೆ ಸಲ್ಲಿಸತಕ್ಕದ್ದು.

(ಬಿ) ಉಪ ವಿಭಾಗ ಮಟ್ಟದ ಸಮಿತಿಯ ಉಪ ವಿಭಾಗೀಯ ಅಧಿಕಾರಿಗಳು ಪ್ರಸ್ತುತ ಯಾವುದೇ ಗ್ರಾಮದ ಭಾಗವಾಗಿರದ ಆದರೆ ಗೊತ್ತುವಳಿಯ ಮುಖಾಂತರ ಪಂಚಾಯಿತಿಯ ವ್ಯಾಪ್ತಿಯೊಳಗೆ ಗ್ರಾಮಗಳಾಗಿ ಸೇರ್ಪಡೆ ಮಾಡಲಾದ ಕುಗ್ರಾಮಗಳು ಮತ್ತು ವಸತಿ ಸ್ಥಳಗಳ ಪಟ್ಟಿಯನ್ನು ಕ್ರೋಢೀಕರಿಸತಕ್ಕದ್ದು ಮತ್ತು ಸಂಬಂಧಪಟ್ಟ ರಾಜ್ಯದ ಕಾನೂನುಗಳಲ್ಲಿ ಉಪಬಂಧಿಸಲಾದಂತೆ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಹಾಲಿ ಇರುವ ಗ್ರಾಮಕ್ಕೆ ಸೇರ್ಪಡೆ ಮಾಡುವ ಮೂಲಕ ಇಲ್ಲವೆ ಇತರ ರೀತಿಯಲ್ಲಾಗಲಿ ಒಂದು ಗ್ರಾಮ ಎಂದು ರೂಪಿಸತಕ್ಕದ್ದು ಮತ್ತು ಆ ಪಟ್ಟಿಗಳಲ್ಲಿ ಸಾರ್ವಜನಿಕ ಟೀಕೆಗಳೇನಾದರೂ ಇದ್ದರೆ ಅವುಗಳನ್ನು ಪರಿಗಣಿಸಿದ ತರುವಾಯ ಜಿಲ್ಲಾ ಮಟ್ಟದ ಸಮಿತಿಯು ಅಂತಿಮಗೊಳಿಸತಕ್ಕದ್ದು.

(ಸಿ) ಕುಗ್ರಾಮಗಳು ಮತ್ತು ವಸತಿ ಸ್ಥಳಗಳ ಪಟ್ಟಿಗಳನ್ನು ಅಂತಿಮಗೊಳಿಸಿದ ತರುವಾಯ, ಈ ಕುಗ್ರಾಮಗಳು ಮತ್ತು ವಸತಿ ಸ್ಥಳಗಳಲ್ಲಿರುವ ಹಕ್ಕುಗಳನ್ನು ಮಾನ್ಯ ಮಾಡುವ ಮತ್ತು ನಿಹಿತಗೊಳಿಸುವ ಪ್ರಕ್ರಿಯೆಯನ್ನು ಈಗಾಗಲೇ ಮಾನ್ಯ ಮಾಡಲಾದ ಯಾವುದೇ ಹಕ್ಕುಗಳಿಗೆ ಬಾಧಕವಾಗದಂತೆ ಕೈಗೊಳ್ಳಬೇಕು."

**4. ಸದರಿ 3ನೇ ನಿಯಮದ:–**

(ಎ) (1)ನೇ ಉಪ–ನಿಯಮದಲ್ಲಿ, "ಕನಿಷ್ಠ ಮೂರನೇ ಒಂದು ಭಾಗದಷ್ಟು ಸದಸ್ಯರು ಅನುಸೂಚಿತ ಬುಡಕಟ್ಟಿಗೆ ಸೇರಿದವರಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ ಕನಿಷ್ಠ ಮೂರನೇ ಎರಡು ಭಾಗದಷ್ಟು ಸದಸ್ಯರು ಅನುಸೂಚಿತ ಬುಡಕಟ್ಟಿಗೆ ಸೇರಿದವರಾಗಿರತಕ್ಕದ್ದು." ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಬಿ) (3)ನೇ ಉಪ–ನಿಯಮದ ತರುವಾಯ, ಈ ಮುಂದಿನ ಉಪನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"(4) ಅರಣ್ಯ ಹಕ್ಕುಗಳ ಸಮಿತಿಯನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ತಿದ್ದುಪಡಿಗಳ ನಿಯಮಗಳು, 2012 ಜಾರಿಗೊಳ್ಳುವ ದಿನಾಂಕಕ್ಕೆ ಮೊದಲು ಮಾನ್ಯ ಮಾಡಲಾದ ಅರಣ್ಯ ಹಕ್ಕುಗಳ ಅಥವಾ ಈಗಾಗಲೇ ಆರಂಭಿಸಲಾದ ಕ್ಲೇಮುಗಳ ಪರಿಶೀಲನಾ ಪ್ರಕ್ರಿಯೆಯನ್ನು ಪುನರ್ ಪ್ರಾರಂಭಿಸಕ್ಕದ್ದಲ್ಲ."

**5. ಸದರಿ ನಿಯಮಗಳ, 4ನೇ ನಿಯಮದಲ್ಲಿ:–**

(i)(ಇ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

(ಎಫ್) ಅರಣ್ಯ ವಾಸಿ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ ಪ್ರಯೋಜನಕ್ಕಾಗಿ ಅಂತಹ ಸಮುದಾಯ ಅರಣ್ಯ ಸಂಪನ್ಮೂಲಗಳನ್ನು ಸಮರ್ಥವಾಗಿ ಮತ್ತು ನ್ಯಾಯ ಸಮ್ಮತ ನಿರ್ವಹಣೆಯ ದೃಷ್ಟಿಯಿಂದ ಸಮುದಾಯದ ಅರಣ್ಯ ಸಂಪನ್ಮೂಲಗಳಿಗಾಗಿ ಒಂದು ಸಂರಕ್ಷಣಾ

ಮತ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸುವ (ಇ) ಖಂಡದ ಮೇರೆಗೆ ರಚಿಸಲಾದ ಸಮಿತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಮತ್ತು ಸಮಿತಿಯು ಅಗತ್ಯವೆಂದು ಪರಿಗಣಿಸಬಹುದಾದಂಥ ಮಾರ್ಪಾಟುಗಳೊಂದಿಗೆ ಅರಣ್ಯ ಇಲಾಖೆಯ ಅತಿ ಸಣ್ಣ ಯೋಜನೆಗಳು ಅಥವಾ ಕಾರ್ಯನಿರ್ವಹಣಾ ಯೋಜನೆಗಳು ಅಥವಾ ನಿರ್ವಹಣಾ ಯೋಜನೆಗಳೊಂದಿಗೆ ಅಂತಹ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯನ್ನು ಸಂಯೋಜನೆಗೊಳಿಸತಕ್ಕದ್ದು.

(ಬಿ) ಸಾಗಾಣೆ ಪರ್ಮಿಟ್ಟುಗಳ ನೀಡಿಕೆ, ಉತ್ಪನ್ನ ಮಾರಾಟದಿಂದ ಬರುವ ಆದಾಯದ ಬಳಕೆ ಅಥವಾ ನಿರ್ವಹಣೆ ಯೋಜನೆಗಳ ಮಾರ್ಪಾಟಿಗೆ ಸಂಬಂಧಿಸಿದ ಸಮಿತಿಯ ಎಲ್ಲಾ ನಿರ್ಣಯಗಳ ಅನುಮೋದನೆ ಮಾಡತಕ್ಕದ್ದು.

(ii) (2) ನೇ ಉಪ-ನಿಯಮಕ್ಕೆ ಬದಲಾಗಿ, ಈ ಮುಂದಿನ ಉಪ-ನಿಯಮವನ್ನು ಪ್ರತ್ಯಯೋಜಿಸತಕ್ಕದ್ದು, ಎಂದರೆ:-

"(2) ಗ್ರಾಮ ಸಭಾ ಸಭೆಯ ಕೋರಂ ಆ ಗ್ರಾಮ ಸಭೆಯ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಅರ್ಧಕ್ಕಿಂತ ಕಡಿಮೆ ಇರತಕ್ಕದ್ದಲ್ಲ:

ಪರಂತು ಹಾಜರಿರುವ ಸದಸ್ಯರ ಪೈಕಿ ಕೊನೇಪಕ್ಷ ಮೂರನೇ ಒಂದು ಭಾಗದಷ್ಟು ಮಹಿಳಾ ಸದಸ್ಯರಿರತಕ್ಕದ್ದು.

ಮತ್ತು ಪರಂತು, ಅರಣ್ಯ ಹಕ್ಕುಗಳ ಕ್ಲೇಮುಗಳ ಸಂಬಂಧದಲ್ಲಿ ಯಾವುದೇ ಗೊತ್ತುವಳಿಗಳನ್ನು ಅಂಗೀಕರಿಸಬೇಕಾದಾಗ ಅರಣ್ಯ ಹಕ್ಕುಗಳಿಗೆ ಕ್ಲೇಮುದಾರರು ಅಥವಾ ಅವರ ಪ್ರತಿನಿಧಿಗಳು ಕೊನೇ ಪಕ್ಷ ಶೇಕಡ ಐವತ್ತರಷ್ಟು ಹಾಜರಿರತಕ್ಕದ್ದು.

ಅಲ್ಲದೆ ಅಂಥ ಗೊತ್ತುವಳಿಗಳನ್ನು ಹಾಜರಿರುವವರ ಸರಳ ಬಹುಮತ ಮತ್ತು ಮತದಾನದ ಮೂಲಕ ಅಂಗೀಕರಿಸತಕ್ಕದ್ದು."

6. ಸದರಿ ನಿಯಮಗಳ, 6ನೇ ನಿಯಮದಲ್ಲಿ (1)ನೇ ಖಂಡಕ್ಕೆ ಬದಲಾಗಿ, ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(I) ಈ ನಿಯಮಗಳ ಅನುಬಂಧ- I (ನಮೂನೆಗಳು ಎ,ಬಿ ಮತ್ತು ಸಿ) ರಲ್ಲಿ ಒದಗಿಸಲಾದ ಕ್ಲೇಮುದಾರರಿಗೆ ಕ್ಲೇಮುಗಳ ನಮೂನೆಯು ಸುಲಭವಾಗಿ ಮತ್ತು ಉಚಿತವಾಗಿ ಲಭ್ಯವಾಗುವಂತೆ ಮಾಡಿರತಕ್ಕದ್ದು."

**7. ಸದರಿ ನಿಯಮಗಳ, 8ನೇ ನಿಯಮದಲ್ಲಿ:–**

(i) (ಜಿ)ಖಂಡದಲ್ಲಿ, "ಮತ್ತು" ಎಂಬ ಪದವನ್ನು, ಬಿಟ್ಟುಬಿಡತಕ್ಕದ್ದು;

(ii) (ಹೆಚ್)ಖಂಡದಲ್ಲಿ, ಪದದ ಕೊನೆಯಲ್ಲಿ "ಮತ್ತು" ಎಂಬ ಪದವನ್ನು ಸೇರ್ಪಡೆ ಮಾಡತಕ್ಕದ್ದು.

(iii) (ಹೆಚ್)ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(i) ಅಧಿನಿಯಮದ ಮೇರೆಗೆ ಈ ನಿಯಮಗಳಿಗೆ ಅನುಬಂಧ–IV ರಲ್ಲಿ ನಿರ್ದಿಷ್ಟಪಡಿಸಲಾದಂತೆ ಸಮುದಾಯ ಅರಣ್ಯ ಸಂಪನ್ಮೂಲ ಹಕ್ಕಿನ ದಾಖಲೆಯ ಪ್ರಮಾಣೀಕೃತ ಪ್ರತಿ ಮತ್ತು ಹಕ್ಕುಪತ್ರವನ್ನು ಸಂಬಂಧಪಟ್ಟ ಗ್ರಾಮಸಭಾ ಅಥವಾ 3ನೇ ಪ್ರಕರಣ (1)ನೇ ಉಪ–ಪ್ರಕರಣದ (i)ನೇ ಖಂಡದ ಮೇರೆಗೆ ಮಾನ್ಯ ಮಾಡಲಾದ ಸಮುದಾಯ ಅರಣ್ಯ ಸಂಪನ್ಮೂಲದ ಮೇಲೆ ಹಕ್ಕುಗಳನ್ನು ಹೊಂದಿರುವ ಸಮುದಾಯಕ್ಕೆ ಒದಗಿಸಲಾಗಿರುವುದನ್ನು ಖಚಿತಪಡಿಸತಕ್ಕದ್ದು."

**8. ಸದರಿ ನಿಯಮಗಳ, 10ನೇ ನಿಯಮದಲ್ಲಿ:–**

(i)(ಸಿ)ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(ಸಿ) ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ, ಪರಿಶೀಲಿಸುವ ಮತ್ತು ನಿಹಿತಗೊಳಿಸುವ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ನಡೆಸಲು ಕನಿಷ್ಟ ಮೂರು ತಿಂಗಳಿಗೆ ಒಂದು ಬಾರಿಯಾದರೂ ಸಭೆ ಸೇರಿ, ಕ್ಷೇತ್ರಮಟ್ಟದ ಸಮಸ್ಯೆಗಳನ್ನು ಪರ್ಯಾಲೋಚಿಸಬೇಕು ಮತ್ತು ನಿವಾರಣೆ ಮಾಡಬೇಕು ಮತ್ತು ಕ್ಲೇಮುಗಳ ಸ್ಥಿತಿಗತಿಗಳು, ಅಧಿನಿಯಮದ ಮೇರೆಗೆ ಅಗತ್ಯಪಡಿಸಿದ ಕ್ರಮಗಳ ಅನುಪಾಲನೆ, ಅನುಮೋದಿತ ಕ್ಲೇಮುಗಳ ವಿವರಗಳು, ತಿರಸ್ಕರಣೆಗೆ ಕಾರಣಗಳು ಯಾವುದಾದರೂ ಇದ್ದರೆ ಅವುಗಳು ಮತ್ತು ಇತ್ಯರ್ಥವಾಗಬೇಕಿರುವ ಕ್ಲೇಮುಗಳ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ತಮ್ಮ ನಿರ್ಧಾರಣೆ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಈ ನಿಯಮಗಳ ಅನುಬಂಧ V ರಲ್ಲಿ ಇರುವಂತಹ ನಮೂನೆಯಲ್ಲಿ ತ್ರೈಮಾಸಿಕ ವರದಿಯನ್ನು ಒದಗಿದತಕ್ಕದ್ದು."

(ii) (ಇ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎಫ್) ವಿಶೇಷವಾಗಿ 3ನೇ ಪ್ರಕರಣದ (1)ನೇ ಉಪ–ಪ್ರಕರಣದ (ಎಂ) ಖಂಡ ಮತ್ತು 4ನೇ ಪ್ರಕರಣದ (8)ನೇ ಉಪ–ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಅನುಪಾಲನೆಯ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು."

9. ಸದರಿ ನಿಯಮಗಳ, 11ನೇ ನಿಯಮದ (4)ನೇ ಉಪ–ನಿಯಮದಲ್ಲಿ "ನಮೂನೆ ಬಿ ಯಲ್ಲಿ ಸಮುದಾಯದ ಅರಣ್ಯ ಹಕ್ಕುಗಳು" ಎಂಬ ಪದಗಳು ಮತ್ತು ಅಕ್ಷರಗಳಿಗೆ ಬದಲಿಗೆ "ನಮೂನೆ ಬಿ ಯಲ್ಲಿ ಸಮುದಾಯದ ಅರಣ್ಯ ಹಕ್ಕುಗಳು ಮತ್ತು ನಮೂನೆ ಸಿ ಯಲ್ಲಿ 3ನೇ ಪ್ರಕರಣದ (1) ನೇ ಉಪ–ಪ್ರಕರಣದ (i) ನೇ ಖಂಡದ ಮೇರೆಗೆ ಸಮುದಾಯದ ಅರಣ್ಯ ಸಂಪನ್ಮೂಲದ ಮೇಲಿನ ಹಕ್ಕು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

10. ಸದರಿ ನಿಯಮಗಳ 12ನೇ ನಿಯಮದ (1)ನೇ ಉಪ–ನಿಯಮದಲ್ಲಿ, (ಇ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎಫ್) ಸಮುದಾಯದ ಅರಣ್ಯ ಸಂಪನ್ಮೂಲದ ರೂಢಿಗತ ಸರಹದ್ದುಗಳು ಮತ್ತು ರೂಢಿಗತ ಪ್ರವೇಶವನ್ನು ಚೆನ್ನಾಗಿ ತಿಳಿದಿರುವ ಹಿರಿಯರನ್ನೊಳಗೊಂಡಂತೆ ಇತರ ಗ್ರಾಮಸಭಾ ಸದಸ್ಯರೊಂದಿಗೆ ಅಂತಹ ಸರಹದ್ದುಗಳನ್ನು ರೂಪಿಸತಕ್ಕದ್ದು.

(ಜಿ) ಗುರುತಿಸಬಹುದಾದ ಪ್ರಮುಖ ಭೂ ಗುರುತುಗಳೊಂದಿಗೆ ಮತ್ತು 13ನೇ ನಿಯಮದ(2)ನೇ ಉಪ–ನಿಯಮದಲ್ಲಿ ಗಣನೆ ಮಾಡಿದಂತೆ ಮುಖ್ಯ ಸಾಕ್ಷ್ಯದ ಮೂಲಕ ಒಂದು ಸಮುದಾಯದ ಅರಣ್ಯ ಸಂಪನ್ಮೂಲ ನಕ್ಷೆಯನ್ನು ಸಿದ್ದಪಡಿಸತಕ್ಕದ್ದು. ತರುವಾಯ ಅಂಥ ಸಮುದಾಯ ಅರಣ್ಯ ಸಂಪನ್ಮೂಲ ಕ್ಲೇಮನ್ನು ಸರಳ ಬಹುಮತದಿಂದ ಅಂಗೀಕರಿಸಿದ ಗ್ರಾಮಸಭಾ ಗೊತ್ತುವಳಿಯ ಮೂಲಕ ಅನುಮೋದಿಸತಕ್ಕದ್ದು.

**ವಿವರಣೆ:** ಸಮುದಾಯ ಅರಣ್ಯ ಸಂಪನ್ಮೂಲದ ನಿರೂಪಣೆಯು ಮೀಸಲು ಅರಣ್ಯ, ಸಂರಕ್ಷಿತ ಅರಣ್ಯ, ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳಂತಹ

ಹಾಲಿ ಇರುವ ಕಾನೂನು ಬದ್ಧ ಸರಹದ್ದುಗಳು ಒಳಗೊಂಡಿರಬಹುದು ಮತ್ತು ಅಂಥ ನಿರೂಪಣೆಯನ್ನು ಅಂತಹ ಸಮುದಾಯ ಅರಣ್ಯ ಸಂಪನ್ಮೂಲಗಳ ಪ್ರವೇಶಾವಕಾಶ. ಸಂರಕ್ಷಣೆ ಮತ್ತು ಸಮರ್ಥ ಬಳಕೆಯ ಅಧಿಕಾರಗಳನ್ನು ರೂಪಿಸತಕ್ಕದ್ದು ಮತ್ತು ಮಾನ್ಯ ಮಾಡತಕ್ಕದ್ದು."

11. ಸದರಿ ನಿಯಮಗಳಲ್ಲಿ, 12ನೇ ನಿಯಮದ ತರುವಾಯ ಈ ಮುಂದಿನ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:–

**"12ಎ. ಹಕ್ಕುಗಳ ಮಾನ್ಯತೆಯ ಪ್ರಕ್ರಿಯೆ–**

(1) ಅರಣ್ಯ ಹಕ್ಕುಗಳ ಸಮಿತಿಯಿಂದ ಸೂಚನೆಯನ್ನು ಸ್ವೀಕರಿಸಿದ ಮೇಲೆ, ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು, ಕ್ಲೇಮುಗಳ ಪರಿಶೀಲನೆಯ ಅವಧಿಯಲ್ಲಿ ಮತ್ತು ನಿವೇಶನ ಕುರಿತಾದ ಸಾಕ್ಷ್ಯಗಳ ಪರಿಶೀಲನೆ ಅವಧಿಯಲ್ಲಿ ಹಾಜರಿರತಕ್ಕದ್ದು ಮತ್ತು ನಡಾವಳಿಗಳಿಗೆ ತಮ್ಮ ಪದನಾಮ, ದಿನಾಂಕ ಮತ್ತು ಟಿಪ್ಪಣಿಗಳು ಯಾವುದಾದರೂ ಇದ್ದರೆ ಅವುಗಳೊಂದಿಗೆ ಸಹಿ ಮಾಡತಕ್ಕದ್ದು.

(2) ತಮ್ಮ ಪ್ರತಿನಿಧಿಗಳು ಕ್ಷೇತ್ರ ತಪಾಸಣಾ ಅವಧಿಯಲ್ಲಿ ಗೈರುಹಾಜರಾಗಿದ್ದಾರೆಂಬ ಕಾರಣಕ್ಕಾಗಿ ಗ್ರಾಮಸಭಾದಿಂದ ಅನುಮೋದನೆಗೊಂಡ ಕ್ಲೇಮಿಗೆ ನಂತರದ ದಿನದಲ್ಲಿ ಅರಣ್ಯ ಅಥವಾ ಕಂದಾಯ ಇಲಾಖೆಗಳು ಯಾವುದೇ ಆಕ್ಷೇಪಣೆಗಳನ್ನು ಮಾಡಿದ್ದರೆ. ಆ ಕ್ಲೇಮನ್ನು ಆಕ್ಷೇಪಣೆ ಎತ್ತಿದ ಸಮಿತಿಯು ಮರು ಪರಿಶೀಲನೆಗಾಗಿ ಗ್ರಾಮಸಭಾಕ್ಕೆ ವಾಪಸ್ಸು ಕಳುಹಿಸತಕ್ಕದ್ದು ಮತ್ತು ಪ್ರತಿನಿಧಿಗಳು ಪುನಃ ಪರಿಶೀಲನಾ ಪ್ರಕ್ರಿಯೆಗೆ ಹಾಜರಾಗಲು ವಿಫಲವಾದರೆ, ಕ್ಷೇತ್ರ ಪರಿಶೀಲನೆ ಕುರಿತಂತೆ ಗ್ರಾಮಸಭಾದ ನಿರ್ಣಯುವೇ ಅಂತಿಮವಾಗತಕ್ಕದ್ದು.

(3) ಗ್ರಾಮಸಭಾದಿಂದ ಒಂದು ಕ್ಲೇಮಿನ ಮಾರ್ಪಾಡು ಅಥವಾ ನಿರಾಕರಣೆ ಅಥವಾ ಉಪ–ವಿಭಾಗೀಯ ಮಟ್ಟದ ಸಮಿತಿಯಿಂದ ಜಿಲ್ಲಾ ಮಟ್ಟದ ಸಮಿತಿಗೆ ಕಳುಹಿಸಿದ ಒಂದು ಕ್ಲೇಮಿನ ಮಾರ್ಪಾಡು ಅಥವಾ ನಿರಾಕರಣೆ ಶಿಫಾರಸ್ಸಿನ ಸಂದರ್ಭದಲ್ಲಿ, ಕ್ಲೇಮು ಕುರಿತಾದ ಅಂತಹ ನಿರ್ಣಯ ಅಥವಾ

ಶಿಫಾರಸ್ಸನ್ನು ಉಪ-ವಿಭಾಗೀಯ ಮಟ್ಟದ ಸಮಿತಿ ಅಥವಾ ಸಂದರ್ಭಾನುಸಾರ ಜಿಲ್ಲಾ ಮಟ್ಟದ ಸಮಿತಿಗೆ ಅರ್ಜಿ ಸಲ್ಲಿಸಲು ಕ್ಲೇಮುದಾರನಿಗೆ ಸಾಧ್ಯವಾಗುವಂತೆ ಪ್ರಸ್ತುತ ಇರುವ 60 ದಿನಗಳ ಅವಧಿಯು ಜೊತೆಗೆ 30ದಿನಗಳ ಹೆಚ್ಚಿನ ಕಾಲವಕಾಶ ವಿಸ್ತರಣೆಯು ಸಂಬಂಧಪಟ್ಟ ಸಮಿತಿಗಳ ವಿಚೇಚನೆಗೆ ಸೇರಿರುತ್ತೆ.

(4) ಇತರ ಯಾವುದೇ ರಾಜ್ಯ ಏಜೆನ್ಸಿಯ ಗ್ರಾಮಸಭಾ ಅಥವಾ ಉಪ-ವಿಭಾಗೀಯ ಮಟ್ಟದ ನಿರ್ಣಯಕ್ಕೆ ಆಕ್ಷೇಪಣೆ ಸಲ್ಲಿಸಲು ಅಪೇಕ್ಷಿಸಿದರೆ, ಅದು ಉಪ-ವಿಭಾಗೀಯ ಮಟ್ಟದ ಸಮಿತಿ ಅಥವಾ ಸಂದರ್ಭಾನುಸಾರ ಜಿಲ್ಲಾ ಮಟ್ಟದ ಸಮಿತಿಯ ಮುಂದೆ ಆಪೀಲನ್ನು ಸಲ್ಲಿಸತಕ್ಕದ್ದು, ಕ್ಲೇಮುದಾರನನ್ನು ವಿಚಾರಣೆ ಮಾಡಿದ ತರುವಾಯ (ಸಂಬಂಧಿಸಿದ ಏಜೆನ್ಸಿ ಯಾವುದಾದರೂ ಇದ್ದರೆ, ಅದರ ಪ್ರತಿನಿಧಿಯ ಅನುಪಸ್ಥಿತಿಯಲ್ಲಿ) ಸಮಿತಿಯು ಇದನ್ನು ತೀರ್ಮಾನಿಸತಕ್ಕದ್ದು.

(5) ಬಾಧಿತಗೊಂಡ ವ್ಯಕ್ತಿಯ ಯಾವುದೇ ಅರ್ಜಿಯನ್ನು ಆತನ ಕ್ಲೇಮಿನ ಸಮರ್ಥನೆಗಾಗಿ ಸೂಕ್ತ ಅವಕಾಶ ನೀಡದ ಹೊರತು ವಿಲೇ ಮಾಡತಕ್ಕದ್ದಲ್ಲ.

(6) ಉಪ-ವಿಭಾಗೀಯ ಮಟ್ಟದ ಸಮಿತಿ ಅಥವಾ ಜಿಲ್ಲಾ ಮಟ್ಟದ ಸಮಿತಿಯು, ಗ್ರಾಮ ಸಭೆಯ ನಿರ್ಣಯ ಅಥವಾ ಶಿಫಾರಸ್ಸು ಅಪೂರ್ಣವಾಗಿದೆ ಅಥವಾ ಮೇಲುನೋಟಕ್ಕೆ ಹೆಚ್ಚುವರಿ ಪರಿಶೀಲನೆ ಅಗತ್ಯವಿದೆ ಎಂದು ಕಂಡುಬಂದ ಪ್ರಕರಣದಲ್ಲಿ ಅದನ್ನು ಮಾರ್ಪಾಟು ಮಾಡುವ ಅಥವಾ ತಿರಸ್ಕರಿಸುವುದಕ್ಕೆ ಬದಲಾಗಿ ಮರು ಪರಿಶೀಲನೆಗಾಗಿ ಗ್ರಾಮಸಭೆಗೆ ಕ್ಲೇಮನ್ನು ಹಿಂದಿರುಗಿಸತಕ್ಕದ್ದು.

(7) ಪೂರಕ ದಾಖಲೆಗಳು ಮತ್ತು ಸಾಕ್ಷದೊಂದಿಗೆ ಕ್ಲೇಮನ್ನು ಶಿಫಾರಸ್ಸು ಮಾಡಿರುವ ಅನುಮೋದಿಸಿದ್ದ ನಿರ್ಣಯವನ್ನು, ಉಪ ವಿಭಾಗೀಯ ಮಟ್ಟದ ಸಮಿತಿಯು ಮಾರ್ಪಾಟುಗಳ ಸಹಿತ ಅಥವಾ ಮಾರ್ಪಾಟುಗಳಿಲ್ಲದೆ ಆದರೆ ಅದನ್ನು ಜಿಲ್ಲಾ ಮಟ್ಟದ ಸಮಿತಿಯು ಅನುಮೋದಿಸಿಲ್ಲದ ಪ್ರಕರಣದಲ್ಲಿ ಜಿಲ್ಲಾ ಮಟ್ಟದ ಸಮಿತಿಯು ಗ್ರಾಮ ಸಭೆ ಅಥವಾ ಸಂದರ್ಭಾನುಸಾರ ಉಪ-ವಿಭಾಗೀಯ ಮಟ್ಟದ ಸಮಿತಿಯ ಶಿಫಾರಸ್ಸುಗಳನ್ನು ಅಂಗೀಕರಿಸಿಲ್ಲದಿರುವುದಕ್ಕೆ ಲಿಖಿತದಲ್ಲಿ

ಸವಿವರವಾದ ಕಾರಣಗಳನ್ನು ದಾಖಲು ಮಾಡತಕ್ಕದ್ದು ಮತ್ತು ಜಿಲ್ಲಾ ಮಟ್ಟದ ಸಮಿತಿಯ ಆದೇಶದ ಪ್ರತಿಯನ್ನು ಅದರ ಕಾರಣಗಳ ಸಹಿತ ಸಂದರ್ಭಾನುಸಾರ ಕ್ಷೇಮುದಾರ ಅಥವಾ ಗ್ರಾಮಸಭೆ ಅಥವಾ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು.

(8) 3ನೇ ಪ್ರಕರಣದ (1) ನೇ ಉಪ–ಪ್ರಕರಣದ(ಎ) ಖಂಡದ ಮೇರೆಗೆ ಮಾನ್ಯ ಮಾಡಿದ ಸ್ವಯಂ ಸಾಗುವಳಿಗಾಗಿನ ಭೂ ಹಕ್ಕುಗಳನ್ನು ಜಾನುವಾರು ಸಾಕಾಣಿಕೆ, ರಕ್ಷಣೆ ಮತ್ತು ಇತರ ಕೊಯಿಲು ಕಾರ್ಯಗಳ ನಂತರದ ಚಟುವಟಿಕೆಗಳಾದ ಸರದಿ ಬಿತ್ತನೆ, ಸಸ್ಯ ಬೆಳೆಗಳು ಮತ್ತು ಉತ್ಪನ್ನದ ಸಂಗ್ರಹಣೆಗಳಂಥ ಬೇಸಾಯ ಪೂರಕ ಚಟುವಟಿಕೆಗಳಿಗಾಗಿ ಬಳಕೆಯಾಗುವ ಅರಣ್ಯ ಭೂಮಿಗಳು ಒಳಗೊಂಡಂತೆ ಎಲ್ಲವೂ ನಿರ್ದಿಷ್ಟಪಡಿಸಿದ ಮಿತಿಯೊಳಗೆ ಇರತಕ್ಕದ್ದು.

(9) ಈ ನಿಯಮಗಳ II, III ಮತ್ತು IVನೇ ಅನುಬಂಧಗಳಲ್ಲಿ, ನಿರ್ದಿಷ್ಟ ಪಡಿಸಲಾದಂತೆ, ಹಕ್ಕುಗಳ ಇತ್ಯರ್ಥಪಡಿಸುವಿಕೆ ಮತ್ತು ಹಕ್ಕು ಪತ್ರಗಳ ವಿತರಿಸುವಿಕೆಯ ಪ್ರಕ್ರಿಕೆಯು ಪೂರ್ಣಗೊಂಡ ಮೇಲೆ, ಕಂದಾಯ ಹಾಗೂ ಅರಣ್ಯ ಇಲಾಖೆಗಳು ಹಾಗೆ ನಿಹಿತಗೊಂಡ ಅರಣ್ಯ ಭೂಮಿಯ ಅಂತಿಮ ನಕ್ಷೆಯನ್ನು ತಯಾರಿಸತಕ್ಕದ್ದು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸಂಬಂಧಿತ ರಾಜ್ಯ ಕಾನೂನುಗಳ ಮೇರೆಗೆ ದಾಖಲೆಯ ಹೆಚ್ಚಿನ ಮಾಹಿತಿಯನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ಮೂರು ತಿಂಗಳ ಅವಧಿಯೊಳಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯೊಳಗಾಗಿ ಕಂದಾಯ ಮತ್ತು ಸಂದರ್ಭಾನುಸಾರ ಅರಣ್ಯ ದಾಖಲೆಗಳಲ್ಲಿ ಹಾಗೆ ನಿಹಿತಗೊಂಡ ಅರಣ್ಯ ಹಕ್ಕುಗಳನ್ನ ಸೇರಿಸತಕ್ಕದ್ದು.

(10) ಗ್ರಾಮ ಸಭೆ ನಿರ್ಣಯದ ಮಾರ್ಪಾಟು ಅಥವಾ ತಿರಸ್ಕರಣೆ ಅಥವಾ ಉಪ–ವಿಭಾಗೀಯ ಮಟ್ಟದ ಸಮಿತಿಯ ಶಿಫಾರಸ್ಸು ಒಳಗೊಂಡಿರುವಂತ ಉಪವಿಭಾಗೀಯ ಮಟ್ಟದ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿಯ ಎಲ್ಲಾ ತೀರ್ಮಾನಗಳು ಅಂಥ ಮಾರ್ಪಾಟುಗಳು ಅಥವಾ ಸಂದರ್ಭಾನುಸಾರ ತಿರಸ್ಕರಣೆಗಾಗಿ ಸವಿವರವಾದ ಕಾರಣಗಳನ್ನು ನೀಡತಕ್ಕದ್ದು.

ಪರಂತು, ಕ್ಲೇಮುಗಳ ಯಾವುದೇ ಶಿಫಾರಸ್ಸು ಅಥವಾ ತಿರಸ್ಕರಣೆಯನ್ನು ಕೇವಲ ತಾಂತ್ರಿಕ ಅಥವಾ ಕಾರ್ಯವಿಧಾನಗಳ ಆಧಾರಗಳ ಮೇಲೆ ಮಾಡತಕ್ಕದ್ದಲ್ಲ.

ಮತ್ತೂ ಪರಂತು, ವಿಭಾಗ ಅಥವಾ ಪಂಚಾಯತ್ ಅಥವಾ ಅರಣ್ಯ ಕಾಯುವಿಕೆ ಅಥವಾ ವಲಯ ಮಟ್ಟದಲ್ಲಿನ ಯಾವುದೇ ಸಮಿತಿಯು (ಗ್ರಾಮಸಭೆ ಅಥವಾ ಅರಣ್ಯ ಹಕ್ಕುಗಳ ಸಮಿತಿಯ ಹೊರತು) ಅಥವಾ ಯಾವುದೇ ದರ್ಜೆಯ ಯಾರೇ ಅಧಿಕಾರಿಯು "ಅರಣ್ಯ ಹಕ್ಕುಗಳ ಮೇಲಿನ ಯಾವುದೇ ಕ್ಲೇಮುಗಳ ಸ್ವೀಕರಣೆ ಅಥವಾ ತಿರಸ್ಕರಣೆ, ಮಾರ್ಪಾಟು, ಅಥವಾ ತೀರ್ಮಾನ ಮಾಡುವ ಅಧಿಕಾರ ಹೊಂದಿರತಕ್ಕದ್ದಲ್ಲ.

(11) ಉಪ ವಿಭಾಗೀಯ ಮಟ್ಟದ ಸಮಿತಿ ಅಥವಾ ಜಿಲ್ಲಾ ಮಟ್ಟದ ಸಮಿತಿಯು ಕ್ಲೇಮುಗಳನ್ನು ನಿರ್ಧರಿಸುವಾಗ 13 ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಸಾಕ್ಷವನ್ನು ಪರಿಗಣಿಸತಕ್ಕದ್ದು ಹಾಗೂ ಕ್ಲೇಮಿನ ಪರಿಗಣನೆಗಾಗಿ ನಿರ್ದಿಷ್ಟ ದಾಖಲಾತಿ ಸಾಕ್ಷ್ಯಗಳನ್ನು ಆಧರಿಸಲು ಒತ್ತಾಯಿಸತಕ್ಕದ್ದಲ್ಲ.

**ವಿವರಣೆ:** ಪೂರ್ವ ಅಧಿಕಾರ ಚಲಾವಣೆ ಅಥವಾ ಅದರ ಕೊರತೆಯಿಂದ ಉದ್ಭವಿಸಿದ ದಂಡ ಸ್ವೀಕೃತಿಗಳು, ಒತ್ತುವರಿದಾರರ ಪಟ್ಟಿಗಳು, ಪ್ರಾಥಮಿಕ ಅಪರಾಧ ವರದಿಗಳು, ಅರಣ್ಯ ಇತ್ಯರ್ಥ ವರದಿಗಳು ಹಾಗೂ ಬೇರೆ ಯಾವುದೇ ಹೆಸರಿನಿಂದಾಗಲಿ ಕರೆಯುವ ಅಂಥದೇ ದಸ್ತಾವೇಜುಗಳು ಯಾವುದೇ ಕ್ಲೇಮನ್ನು ತಿರಸ್ಕರಿಸಲು ಏಕಮಾತ್ರ ಆಧಾರವಾಗಿರತಕ್ಕದ್ದಲ್ಲ.

2. ಸ್ಯಾಟಲೈಟ್ ಕಾಲ್ಪನಿಕಗಳು ಮತ್ತು ತಂತ್ರಜ್ಞಾನದ ಇತರ ಉಪಯೋಗಗಳು ಸಾಕ್ಷ್ಯದ ಪೂರಕವಾಗಿರಬಹುದು ಮತ್ತು ಅದನ್ನು ಒಂದು ಬದಲಿ ಎಂದು ಪರಿಗಣಿಸತಕ್ಕದ್ದಲ್ಲ.

**12ಬಿ. ಸಮುದಾಯ ಹಕ್ಕುಗಳ ಮಾನ್ಯತೆಯ ಪ್ರಕ್ರಿಯೆ:**

ಜಿಲ್ಲಾಮಟ್ಟದ ಸಮಿತಿಯು, 3ನೇ ಪ್ರಕರಣದ(i)ನೇ ಉಪಪ್ರಕರಣದ (ಇ) ಖಂಡದಲ್ಲಿ ವಿವರಿಸಲಾದಂತೆ, ವಿಶೇಷವಾಗಿ ಮೂಲನಿವಾಸಿ ಬುಡಕಟ್ಟು ಸಮೂಹಗಳ ಭಿನ್ನತಾ ದುರ್ಬಲತೆ ಹಿನ್ನೆಲೆಯಲ್ಲಿ ಅರಣ್ಯವಾಸಿಗಳ ನಡುವೆ ವಿಶೇಷವಾಗಿ ಮೂಲನಿವಾಸಿ ಬುಡಕಟ್ಟು

ಸಮೂಹಗಳು ಪಾರಂಪರಿಕ ಸಂಘಟನೆಗಳೊಂದಿಗೆ ಸಮಾಲೋಚಿಸಿ ರೂಢಿಗತ ಹಕ್ಕುಗಳನ್ನು ಸ್ವೀಕರಿಸತಕ್ಕದ್ದು ಮತ್ತು ರೂಢಿಗತ ಹಕ್ಕುಗಳಿಗಾಗಿನ ತಮ್ಮ ಕ್ಲೇಮುಗಳನ್ನು ಅವಶ್ಯಕವಿರುವ ಕಡೆಗಳಲ್ಲಿ ತಮ್ಮ ಗ್ರಾಮಸಭೆಗಳು ಮಾನ್ಯತೆ ಮಾಡುವ ಅಲ್ಪಕಾಲಿಕ ಸ್ವರೂಪದ ಮೂಲಕ ಸಂಬಂಧಪಟ್ಟ ಗ್ರಾಮಸಭೆಗಳ ಮುಂದೆ ಸಲ್ಲಿಸಬೇಕು ಎಂಬುದನ್ನು ಪಾಲಿಸತಕ್ಕದ್ದು.

(2) ಜಿಲ್ಲಾ ಮಟ್ಟದ ಸಮಿತಿಯು ಸಂಬಂಧಪಟ್ಟ ಗ್ರಾಮಸಭೆಗಳ ಮುಂದೆ 3ನೇ ಪ್ರಕರಣದ (1)ನೇ ಉಪ ಪ್ರಕರಣ (ಡಿ) ಖಂಡದಲ್ಲಿ ವಿವರಿಸಲಾದಂತೆ ದನಗಾಹಿಗಳು, ವಲಸೆಗಾರರ ಹಾಗೂ ಅಲೆಮಾರಿ ಸಮುದಾಯಗಳಿಂದ ಕ್ಲೇಮುಗಳ ಸಲ್ಲಿಸುವಿಕೆಗಾಗಿ ಅನುಕೂಲ ಮಾಡತಕ್ಕದ್ದು.

(3) ಜಿಲ್ಲಾ ಮಟ್ಟದ ಸಮಿತಿಯು ಅರಣ್ಯವಾಸಿಗಳು ಸಾಂಪದ್ರಾಯಿಕವಾಗಿ ಸಮುಚಿತ ಬಳಕೆಗಾಗಿ ರಕ್ಷಿಸುವ ಮತ್ತು ಸಂರಕ್ಷಣೆ ಮಾಡಬಹುದಾದಂತ ಯಾವುದೇ ಸಮುದಾಯ ಅರಣ್ಯ ಉತ್ಪನ್ನದ ರಕ್ಷಣೆ, ಮರುಉತ್ಪಾದನೆ ಅಥವಾ ಸಂರಕ್ಷಣೆ ಅಥವಾ ನಿರ್ವಹಣೆಗೆ ಸಂಬಂಧಿಸಿದಂತೆ 3ನೇ ಪ್ರಕರಣದ(1) ನೇ ಉಪಪ್ರಕರಣದ (i) ಖಂಡದ ಮೇರೆಗಿನ ಅರಣ್ಯ ಹಕ್ಕುಗಳನ್ನು ಅರಣ್ಯವಾಸಿಗಳು ಇರುವ ಎಲ್ಲ ಗ್ರಾಮಗಳಲ್ಲಿ ಮಾನ್ಯ ಮಾಡಿದೆ ಮತ್ತು ಹಕ್ಕುಪತ್ರಗಳನ್ನು ನೀಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(4) ಯಾವುದೇ ಸಮುದಾಯ ಅರಣ್ಯ ಸಂಪನ್ಮೂಲ ಹಕ್ಕುಗಳನ್ನು ಒಂದು ಗ್ರಾಮದಲ್ಲಿ ಮಾನ್ಯ ಮಾಡದಿರುವ ಪ್ರಕರಣದಲ್ಲಿ ಅದಕ್ಕಾಗಿ ಕಾರಣಗಳನ್ನು ಜಿಲ್ಲಾ ಮಟ್ಟದ ಸಮಿತಿಯ ಕಾರ್ಯದರ್ಶಿಯು ದಾಖಲು ಮಾಡತಕ್ಕದ್ದು.

(5) 3ನೇ ಪ್ರಕರಣದ (ಹೆಚ್) ಖಂಡದ ಮೇರೆಗೆ ಅರಣ್ಯ ಗ್ರಾಮಗಳ ಪರಿವರ್ತನೆ, ದಾಖಲು ಮಾಡಿದ ಇತ್ಯರ್ಥವನ್ನು, ಶಾಲೆಗಳು, ಆರೋಗ್ಯ ಸೌಲಭ್ಯಗಳು ಮತ್ತು ಸಾರ್ವಜನಿಕ ಸ್ಥಳಗಳಂಥ ಪ್ರಸ್ತುತ ಅಥವಾ ಮುಂದೆ ಸಮುದಾಯ ಬಳಕೆಗಾಗಿ ಅಗತ್ಯಪಡಿಸಲಾದ

ಭೂಮಿಗಳು ಸೇರಿದಂತೆ ಅದು ಸಂಪೂರ್ಣವಾಗಿ ಗ್ರಾಮದ ವಾಸ್ತವಿಕ ಭೂ ಬಳಕೆಯನ್ನು ಒಳಗೊಂಡಿರುತಕ್ಕದ್ದು.

**12. ಸದರಿ ನಿಯಮಗಳ 13ನೇ ನಿಯಮದ, (2)ನೇ ಉಪನಿಯಮದಲ್ಲಿ–**

(i) "ಸಮುದಾಯ ಅರಣ್ಯ ಹಕ್ಕುಗಳು" ಎಂಬ ಪದಗಳಿಗೆ ಬದಲಾಗಿ "ಸಮುದಾಯ ಅರಣ್ಯ ಸಂಪನ್ಮೂಲ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (ಸಿ) ಖಂಡದ ತರುವಾಯ, ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:–

(ಡಿ) ಸಂರಕ್ಷಿತ ಅರಣ್ಯ ಎಂದು ಅಥವಾ ಗೋಚಾರ್ ಎಂದು ಅಥವಾ ಗ್ರಾಮದ ಇತರ ಸಾಮಾನ್ಯ ಭೂಮಿಗಳು, ನಿಸ್ತರಿ ಅರಣ್ಯಗಳೆಂದು ಪ್ರಸ್ತುತ ಮೀಸಲು ಅರಣ್ಯದ ಸರ್ಕಾರಿ ದಾಖಲೆಗಳು ಅಥವಾ ಈ ಮುಂದಿನ ವರ್ಗೀಕರಣ.

(ಇ) ಸಾಂಪ್ರದಾಯಿಕ ಕೃಷಿಯ ಮುಂಚಿನ ಅಥವಾ ಪ್ರಚಲಿತ ಪದ್ಧತಿ.

13. ಸದರಿ ನಿಯಮಗಳ 15ನೇ ನಿಯಮದ ತರುವಾಯ, ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

**16. ಅರಣ್ಯ ಹಕ್ಕುಗಳನ್ನು ಹೊಂದಿರುವವರಿಗೆ ಕ್ಲೇಮು ತರುವಾಯ ಬೆಂಬಲ ಮತ್ತು ಆಸರೆ ನೀಡುವುದು–** ರಾಜ್ಯ ಸರ್ಕಾರವು, ತನ್ನ ಇಲಾಖೆಗಳು ವಿಶೇಷವಾಗಿ ಬುಡಕಟ್ಟು ಮತ್ತು ಸಮಾಜ ಕಲ್ಯಾಣ, ಪರಿಸರ ಮತ್ತು ಅರಣ್ಯ, ಕಂದಾಯ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಅರಣ್ಯವಾಸಿ ಪರಿಶಿಷ್ಟ ಪಂಗಡಗಳು ಮತ್ತು ಸಾಂಪ್ರದಾಯಿಕ ಅರಣ್ಯವಾಸಿಗಳ ಸುಧಾರಣೆಗೆ ಸಂಬಂಧಿಸಿದ ಇತರ ಇಲಾಖೆಗಳ ಮೂಲಕ ಭೂ ಸುಧಾರಣೆ, ಭೂ ಹೆಚ್ಚಳ ಮೂಲ ಸೌಕರ್ಯಗಳು ಮತ್ತು ಇತರ ಜೀವನಾಧರ ಕ್ರಮಗಳನ್ನು ಒಳಗೊಂಡಂತೆ ಎಲ್ಲ ಸರ್ಕಾರಿ ಯೋಜನೆಗಳು ಈ ಅಧಿನಿಯಮದ ಮೇರೆಗೆ ಹಕ್ಕುಗಳನ್ನು ಮಾನ್ಯ ಮಾಡಿದ ಮತ್ತು ನಿಹಿತಗೊಂಡಂತ ಅಂಥ ಕ್ಲೇಮುದಾರರು ಮತ್ತು ಸಮುದಾಯಗಳಿಗೆ ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

14. ಸದರಿ ನಿಯಮದಲ್ಲಿ ಅನುಬಂಧದಲ್ಲಿ ನಮೂನೆ 'ಬಿ' ತರುವಾಯ ಈ ಮುಂದಿನ ನಮೂನೆಯನ್ನು ಸೇರಿಸತಕ್ಕದ್ದು, ಎಂದರೆ:–

## ನಮೂನೆ–ಸಿ
## ಸಮುದಾಯ ಅರಣ್ಯ ಸಂಪನ್ಮೂಲಕ್ಕೆ ಹಕ್ಕುಗಳನ್ನು ಪಡೆಯುವ ಕ್ಲೇಮು ನಮೂನೆ
**(ಅಧಿನಿಯಮದ 3(1) (i)ನೇ ಪ್ರಕರಣ ಮತ್ತು ನಿಯಮದ 11(1) ಹಾಗೂ 4(ಎ)ನ್ನು ನೋಡಿ)**

1. ಗ್ರಾಮ/ಗ್ರಾಮಸಭೆ

2. ಗ್ರಾಮ ಪಂಚಾಯತ್

3. ತಹಸೀಲ್/ ತಾಲ್ಲೂಕು

4. ಜಿಲ್ಲೆ

5. ಗ್ರಾಮ ಸಭೆಯ ಸದಸ್ಯರುಗಳು ಹೆಸರು(ಗಳು) *(ಅನುಸೂಚಿತ ಬುಡಕಟ್ಟುಗಳ/ ಇತರ ಪಾರಂಪರಿಕ ಅರಣ್ಯವಾಸಿಗಳ ಸ್ಥಾನಮಾನಗಳನ್ನು ಪ್ರತಿಯೊಬ್ಬ ಸದಸ್ಯರ ಮುಂದೆ ಸೂಚಿಸಿದ ಪ್ರತ್ಯೇಕ ಹಾಳೆಯನ್ನು ಲಗತ್ತಿಸಬೇಕು)*

ಕೆಲವು ಅನುಸೂಚಿತ ಬುಡಕಟ್ಟುಗಳು/ ಇತರ ಪಾರಂಪರಿಕ ಅರಣ್ಯವಾಸಿಗಳ ಹಾಜರಾತಿಯು ಕ್ಲೇಮನ್ನು ಮಾಡಲು ಸಾಕಾಗುತ್ತದೆ.

ಈ ಗ್ರಾಮ ಸಭೆಯ ವಾಸಿಗಳಾದ ಈ ಕೆಳಗೆ ಸಹಿಮಾಡಿರುವ ನಾವು, ಈ ಮೂಲಕ ಕೆಳಗೆ ವಿವರಿಸಿದ ಪ್ರದೇಶ ಮತ್ತು 3(1)(i)ನೇ ಪ್ರಕರಣದ ಮೇರೆಗೆ ನಮ್ಮ ಅರಣ್ಯ ಹಕ್ಕುಗಳ ಮಾನ್ಯತೆಯನ್ನು ಕ್ಲೇಮು ಮಾಡಿರುವಂತೆ ನಮ್ಮ ಸಮುದಾಯ ಅರಣ್ಯ ಸಂಪನ್ಮೂಲಗಳನ್ನು ಒಳಗೊಂಡಿರುವ ಇಲ್ಲಿ ಲಗತ್ತಿಸಲಾದ ನಕ್ಷೆಯಲ್ಲಿನ ಪ್ರದೇಶದ ವಿವಾದವನ್ನು ಬಗೆಹರಿಸುತ್ತವೆ.

(ಸಮುದಾಯವು ಹೊಂದಿರುವ ಸಾಂಪ್ರದಾಯಿಕ ವಿಧಾನಗಳು ಮತ್ತು ಸಮುಚಿತ ಬಳಕೆಗಾಗಿ ಸಾಂಪ್ರದಾಯಿಕವಾಗಿ ರಕ್ಷಿಸುವ/ಪುನರ್ ನಿರ್ಮಿಸುವ/ ಸಂರಕ್ಷಿಸುವ ಮತ್ತು ನಿರ್ವಹಣೆ ಮಾಡುವಂತ ಹಳ್ಳಿಗಾಡು ಸಮುದಾಯಗಳ ಪ್ರಕರಣದಲ್ಲಿ ಗ್ರಾಮದ ಸಾಂಪ್ರದಾಯಿಕ ಅಥವಾ ರೂಢಿಯ ಗಡಿಗಳ ವ್ಯಾಪ್ತಿಯಲ್ಲಿ ಸ್ಥಳ ಗಡಿರೇಖೆ

ಸೂಚಿಸುವ ಸಮುದಾಯ ಅರಣ್ಯ ಸಂಪನ್ಮೂಲದ ನಕ್ಷೆಯನ್ನು ಲಗತ್ತಿಸಿ, ಇದು ಈಗಿರುವ ಕಾನೂನು ಗಡಿಗಳಿಗೆ ಸಂಬಂಧ ಪಡುವುದಿಲ್ಲ ಎಂಬುದನ್ನು ಗಮನಿಸಬೇಕು.)

6. ಖಾಸ್ರ/ಭಾಗ ಸಂಖ್ಯೆ(ಗಳು) ಯಾವುದಾದರೂ ಇದ್ದರೆ ಹಾಗೂ ಗೊತ್ತಿದ್ದರೆ:

7. ಗಡಿಯಲ್ಲಿರುವ ಗ್ರಾಮಗಳು:

(i)

(ii)

(iii)

(ಇದು ಯಾವುದೇ ಇತರ ಗ್ರಾಮಗಳೊಂದಿಗೆ ಸಂಪನ್ಮೂಲಗಳು ಹಾಗೂ ಹೊಣೆಗಾರಿಕೆಗಳನ್ನು ಹಂಚಿಕೆ ಮಾಡುವ ಸಂಬಂಧದ ಮಾಹಿತಿಯನ್ನು ಸಹ ಒಳಗೊಳ್ಳಬಹುದು)

8. ಸಮರ್ಥನೆಯ ಸಾಕ್ಷ್ಯದ ಪಟ್ಟಿ (13ನೇ ನಿಯಮವನ್ನು ನೋಡಿ)

**ಕ್ಲೇಮುದಾರನ(ರ) ಸಹಿ/ ಹೆಬ್ಬೆಟ್ಟಿನ ಗುರುತು.**

**15. ಸದರಿ ನಿಯಮಗಳ ಅನುಬಂಧ ರ ತರುವಾಯ, ಈ ಮುಂದಿನ ಅನುಬಂಧವನ್ನು ಸೇರಿಸತಕ್ಕದ್ದು, ಎಂದರೆ–**

## "ಅನುಬಂಧ–IV

## ಸಮುದಾಯ ಅರಣ್ಯ ಸಂಪನ್ಮೂಲಗಳಿಗೆ ಹಕ್ಕುಪತ್ರ

**(8(i)ನೇ ನಿಯಮ ನೋಡಿ)**

1. ಗ್ರಾಮ/ಗ್ರಾಮಸಭೆ

2. ಗ್ರಾಮ ಪಂಚಾಯತ್

3. ತಹಸೀಲ್/ ತಾಲ್ಲೂಕು

4. ಜಿಲ್ಲೆ

5. ಅನುಸೂಚಿತ ಬುಡಕಟ್ಟು/ ಇತರ ಪಾರಂಪರಿಕ ಅರಣ್ಯವಾಸಿಗಳು; ಅನುಸೂಚಿತ ಬುಡಕಟ್ಟುಗಳ ಸಮುದಾಯ/ ಇತರ ಪಾರಂಪರಿಕ ಅರಣ್ಯವಾಸಿಗಳ ಸಮುದಾಯ/ ಈ ಎರಡು

6. ಪ್ರಮುಖ ಭೂ ಗುರುತುಗಳ ಮೂಲಕ ಮತ್ತು ಖಾಸ್ರ/ಭಾಗ ಸಂಖ್ಯೆಗಳ ಮೂಲಕ ರೂಢಿಗತಗಡಿಯುವ ಸೇರಿದಂತೆ ಗಡಿಗಳ ವಿವರಣೆ

ಸದರಿ ಪ್ರದೇಶದ ವ್ಯಾಪ್ತಿಯಲ್ಲಿ ಈ ಸಮುದಾಯವು ರಕ್ಷಿಸುವ, ಪುನರುಜ್ಜೀವಗೊಳಿಸುವ ಅಥವಾ ಸಂರಕ್ಷಿಸುವ ಅಥವಾ ನಿರ್ವಹಣೆ ಮಾಡುವ ಮತ್ತು ಇವರು ಅಧಿನಿಯಮದ 391)(i)ನೇ ಪ್ರಕಾರ ಸಮುಚಿತ ಬಳಕೆಗಾಗಿನ ಸಂಪ್ರದಾಯಿಕವಾಗಿ ರಕ್ಷಿಸುವ ಮತ್ತು ಸಂರಕ್ಷಿಸುವಂತ ಈ (ಹೆಸರಿಸಬೇಕು)

ಸಮುದಾಯ ಅರಣ್ಯ ಸಂಪನ್ಮೂಲಗಳಿಗೆ ಹಕ್ಕನ್ನು ಹೊಂದಿರುತ್ತದೆ. ಅನುಸುಚಿತ ಬುಡಕಟ್ಟುಗಳು ಹಾಗೂ ಇತರ ಪಾರಂಪರಿಕ ಅರಣ್ಯವಾಸಿಗಳು (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಲ್ಲಿ ಇರುವಂತಹವರನ್ನು ಹೊರತು, ಈ ಹಕ್ಕಿನ ಮೇಲೆ ಯಾವುದೇ ಷರತ್ತುಗಳನ್ನು ವಿಧಿಸತಕ್ಕದ್ದಲ್ಲ.

ಈ ಕೆಳಗೆ ಸಹಿ ಮಾಡಿರುವ ನಾವು, ಸರ್ಕಾರದ ಪರವಾಗಿ, ಈ ಮೂಲಕ ಮೇಲೆ ಸೂಚಿಸಿದ ಸಮುದಾಯ ಅರಣ್ಯ ಸಂಪನ್ಮೂಲಗಳ (ವ್ಯಾಪ್ತಿ, ಅಗತ್ಯ ಪರಿಮಾಣ, ಪ್ರದೇಶ ಇವುಗಳಲ್ಲಿ ಯಾವುದು ಅನ್ವಯಿಸುವುದೋ ಅಲ್ಲಿ ಹೆಸರಿಲಾಗುವ ಹಾಗೂ ನಿರ್ದಿಷ್ಟಪಡಿಸಲಾಗುವ) ಗ್ರಾಮ ಸಭಾ/ ಸಮುದಾಯ(ದವರಿಗೆ) ಹಕ್ಕುಪತ್ರದಲ್ಲಿ ಸೂಚಿಸಿದಂತೆ ಸಮುದಾಯ ಅರಣ್ಯ ಸಂಪನ್ಮೂಲವನ್ನು ದೃಢೀಕರಿಸಲು ಸಹಿ ಮಾಡಿರುತ್ತೇವೆ.

(ವಿಭಾಗೀಯ ಅರಣ್ಯ ಅಧಿಕಾರಿ/
ಅರಣ್ಯಗಳ ಉಪಸಂಪರಕ್ಷಣಾಧಿಕಾರಿ)

(ಜಿಲ್ಲಾ ಬುಡಕಟ್ಟು ಕಲ್ಯಾಣ ಅಧಿಕಾರಿ)

**(ಜಿಲ್ಲಾ ಕಲೆಕ್ಟರ್/ ಜಿಲ್ಲಾಧಿಕಾರಿ)**

**"ಅನುಬಂಧ–V**

**ತ್ರೈಮಾಸಿಕ ವರದಿಯನ್ನು ಒದಗಿಸಲು ನಮೂನೆ**

**(10 (ಸಿ) ನಿಯಮವನ್ನು ನೋಡಿ)**

| | |
|---|---|
| **1. ರಾಜ್ಯದ ಹೆಸರು** | |
| **2. ಕ್ಲೇಮುಗಳ ಸ್ಥಾನಮಾನ** | |
| ***(ಎ) ವೈಯಕ್ತಿಕ ಹಕ್ಕುಗಳು*** | |
| • ಸಲ್ಲಿಸಲಾದುದು | |
| • ತಿರಸ್ಕರಿಸಲಾದುದು | |
| • ಬಾಕಿ ಇರುವುದು | |
| • ಉದಾರಣೆಗಳ ಸಹಿತ ತಿರಸ್ಕರಣೆಗಾಗಿ ಕಾರಣಗಳು | |
| • ಸಲಹೆ ಮಾಡಲಾದ ಸುಧಾರಕ ಕ್ರಮಗಳು | |
| • ಯಾವುದೇ ಇತರ ಟಿಪ್ಪಣಿಗಳು | |
| • ಒಳಗೊಂಡಿರುವ ಅರಣ್ಯ ಭೂಮಿಯ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | |
| • ಅಧಿನಿಯಮದ 3(1) (ಎ) ಪ್ರಕರಣದ ಮೇರೆಗೆ ಅರಣ್ಯ ಹಾಗೂ ಕಂದಾಯ ದಾಖಲೆಗಳನ್ನು ಇಂದೀಕರಿಸಿದ (updation)ಸ್ಥಾನಮಾನ(ಹೆಕ್ಟೇರುಗಳಲ್ಲಿ) | |
| ***ಬಿ) ಸಮುದಾಯ ಅರಣ್ಯಹಕ್ಕುಗಳು*** | |
| • ಸಲ್ಲಿಸಲಾದುದು | |
| • ತಿರಸ್ಕರಿಸಲಾದುದು | |
| • ಬಾಕಿಯಿರುವುದು | |

| | |
|---|---|
| • ಒಳಗೊಂಡಿರುವ ಅರಣ್ಯ ಭೂಮಿಯ ವಿಸ್ತೀರ್ಣ | |
| • ಅಧಿನಿಯಮದ 3(1ಬಿ) ಯಿಂದ 391)(1)ನೇ ಪ್ರಕರಣದ ಮೇರೆಗೆ ಅರಣ್ಯ ಹಾಗೂ ಕಂದಾಯ ದಾಖಲೆಗಳ ಇಂದೀಕರಣ ಸ್ಥಾನಮಾನ (ಹೆಕ್ಟೇರುಗಳಲ್ಲಿ) | |
| • ಉದಾಹರಣೆಗಳ ಸಹಿತ ತಿರಸ್ಕರಣೆಗಾಗಿನ ಕಾರಣಗಳು | |
| • ಸಲಹೆ ಮಾಡಲಾದ ಸುಧಾರಕ ಕ್ರಮಗಳು | |
| • ಯಾವುದೇ ಇತರ ಟಿಪ್ಪಣಿಗಳು | |
| ಸಿ) ಸಮುದಾಯ ಅರಣ್ಯ ಸಂಪನ್ಮೂಲವನ್ನು ನಿರ್ವಹಿಸುವ ಮತ್ತು ಯಾರು ಎಂಬುದರ ವಿವರಗಳು | |
| ಡಿ) ಒಳ್ಳೆಯ ಪದ್ಧತಿಗಳು (ಯಾವುದಾದರೂ ಇದ್ದಲ್ಲಿ) | |
| ಇ) ಅಧಿನಿಯಮದ 3(2)ನೇ ಪ್ರಕರಣದ ಮೇರೆಗೆ ದಿಕ್ಕು ಬದಲಾಯಿಸಿದ ಪ್ರದೇಶ (ಹೆಕ್ಟೇರುಗಳಲ್ಲಿ) | |
| (ಎಫ್) ಯಾವುದೇ ಇತರ ಷರಾಗಳು | |

**(ಅಧ್ಯಕ್ಷರು)**
**ರಾಜ್ಯಮಟ್ಟದ ಮೇಲ್ವಿಚಾರಣಾ ಸಮಿತಿ**

**(ಸದಸ್ಯ ಕಾರ್ಯದರ್ಶಿ)**
**ರಾಜ್ಯಮಟ್ಟದ ಮೇಲ್ವಿಚಾರಣಾ ಸಮಿತಿ**

ಟಿಪ್ಪಣಿ: ಪ್ರಧಾನ ನಿಯಮಗಳನ್ನು ಭಾರತ ರಾಜಪತ್ರ, ವಿಶೇಷ ಸಂಚಿಕೆ – ಭಾಗ–II, ವಿಭಾಗ–3, ಉಪವಿಭಾಗ (i) ಸಂ.ಜಿ.ಎಸ್.ಆರ್ 1(ಇ), ದಿನಾಂಕ 1ನೇ ಜನವರಿ 2008ರಲ್ಲಿ ಪ್ರಕಟಿಸಲಾಗಿದೆ.

(ಎಫ್.ಸಂ. 23011/32/2010–(ಸಂಪುಟ–II)
ಡಾ॥ ಸಾಧನ ರೌತ್, ಜಂಟಿಕಾರ್ಯದರ್ಶಿ.